—‡ ಶ್ರೀ ವೀತರಾಗಾಯನಮಃ ‡—

ದಿಗಂಬರ ಜೈನ

ಬಾಲಬೋಧ.

ಭಾಗ ೧—೨.

ಶ್ರೀಮದಾಚಾರ್ಯ ಶಾಂತಿಸಾಗರ ದಿಗಂಬರ ಜೈನ
ಸ್ಯಾದ್ವಾದಧರ್ಮ ಪ್ರಸಾರಕ ಸಂಸ್ಥಾಂತರ್ಗತ

ಶ್ರೀ ಶಾಂತಿಸಾಗರ ಗ್ರಂಥಮಾಲೆಯ
ಪುಷ್ಪ ೮.

ಮರಾಠಿ ಲೇಖಕರು:—ಧರ್ಮವೀರ ಶೇಠರಾವಜಿ
ಸಖಾರಾಮ ದೋಶಿ ಸೊಲ್ಲಾಪೂರ.


ಅನುವಾದಕ:—ಬಾಳಗವಡ ದೇವಗವಡ ಪಾಟೀಲ
ಶೇಡಬಾಳ.

ಪ್ರಕಾಶಕ:—ಶ್ರೀಮತಿ ಪದ್ಮಾವತಿಬಾಯಿ ಭ್ರ.
ಜಿನ್ನಪ್ಪಾ ಡೋಂಗರೆ ಗೋಕಾಕ.

ಶ್ರೀ ಮಹಾವೀರ ನಿರ್ವಾಣ ಸಂವತ ೨೪೫[illegible].

ಸನ್ ೧೯೩೩ ಇಸವಿ.

ಕ್ರಯ—ಸದುಪಯೋಗ.



—ǂ ಶ್ರೀ ವೀತರಾಗಾಯನಮಃ ǂ—

ದಿಗಂಬರ ಜೈನ

ಬಾಲಬೋಧ.

ಭಾಗ ೧—೨.

ಶ್ರೀಮದಾಚಾರ್ಯ ಶಾಂತಿಸಾಗರ ದಿಗಂಬರ ಜೈನ
ಸ್ಯಾದ್ವಾದಧರ್ಮ ಪ್ರಸಾರಕ ಸಂಸ್ಥಾಂತರ್ಗತ

ಶ್ರೀ ಶಾಂತಿಸಾಗರ ಗ್ರಂಥಮಾಲೆಯ
ಪುಷ್ಪ ೮.

ಮರಾಠಿ ಲೇಖಕರು:— **ಧರ್ಮವೀರ ಸೇಠರಾವಜಿ ಸಖಾರಾಮ ದೋಶಿ ಸೊಲ್ಲಾಪೂರ.**

ಅನುವಾದಕ: **ಬಾಳಗವಡ ದೇವಗವಡ ಪಾಟೀಲ ಶೇಡಬಾಳ.**

ಪ್ರಕಾಶಕರು:— **ಶ್ರೀಮತಿ ಪದ್ಮಾವತಿಬಾಯಿ ಭೃ. ಜಿನ್ನಪ್ಪಾ ಡೋಂಗರೆ ಗೋಕಾಕ.**

ಮೊದಲನೇ ಆವೃತ್ತಿ ೧೦೦೦ ಪ್ರತಿ.

ಶ್ರೀ ಮಹಾವೀರ ನಿರ್ವಾಣ ಸಂವತ ೨೪೬೫.

ಸನ್ ೧೯೩೯ ಇಸವಿ.

ವಿಜ್ಞಾಪನೆ.

ಚಿಕ್ಕಂದಿನಿಂದಲೇ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಕಾಲಕ್ಕೆ ಮುದ್ದು ಮಕ್ಕಳಿಗೆ ದಿಗಂಬರ ಜೈನ ಧರ್ಮದ ಮಹತ್ವವು ಗೊತ್ತಾಗಬೇಕೆಂಬ ಉದ್ದೇಶದಿಂದ ಇಂಥ ಸಣ್ಣ ಸಣ್ಣ ಪುಸ್ತಕಗಳು "ಶಿಕ್ಷಾಪ್ರಚಾರಕ ಸಮಿತಿ ಜಯಪುರ" ಈ ಸಂಸ್ಥೆಯಿಂದ ಪ್ರಸಿದ್ಧ ಪಡಿಸುತ್ತಿರುವಾಗ್ಗೆ ಇಂಥ ಪುಸ್ತಕಗಳ ಉಪಯೋಗವು ಚನ್ನಾಗಿ ಆದದ್ದು ಕಂಡು ಬಂದದ್ದರಿಂದ ಧರ್ಮವೀರ ಸೇಠ ರಾವಜೀ ಸಖಾರಾಮ ದೋಶೀ ಸೊಲ್ಲಾಪೂರ ಇವರು ಮಹಾರಾಷ್ಟ್ರೀಯ ಜೈನ ವಿದ್ಯಾರ್ಥಿಗಳಗೋಸ್ಕರ ಮರಾಠಿ ಭಾಷೆಯಲ್ಲಿ ಅವತರಿಸಿ ಜೈನ ಬಾಲಬೋಧ ಭಾಗ ೧-೨ ವೆಂಬ ಪುಸ್ತಕವನ್ನು ಪ್ರಕಾಶ ಪಡಿಸಿದರು ಜೈನ ಸಮಾಜದಲ್ಲಿ ಇದರ ಉಪಯೋಗವು ಬಹಳ ಚನ್ನಾಗಿ ಆದದ್ದು ಅದರ ನಾಲ್ಕನೇ ಆವೃತ್ತಿಯ ಮೇಲಿಂದಲೇ ಸಹಜವಾಗಿ ಗೊತ್ತಾಗುತ್ತದೆ. ಇಂಥ ಪುಸ್ತಕದ ಲಾಭವು ನಮ್ಮ ಈ ಕರ್ನಾಟಕದ ವಿದ್ಯಾರ್ಥಿಗಳಿಗೆ ಈ ವರೆಗೂ ದೊರೆತಿರುವದಿಲ್ಲವೆಂಬದಾಗಿ ಕಂಡುಬಂದದ್ದರಿಂದ ಅದನ್ನು ಕನ್ನಡದಲ್ಲಿ ಅವತರಿಸುವ ಪ್ರಯತ್ನವನ್ನು ಮಾಡಿರುತ್ತದೆ ಹಾಗು ಇದರಲ್ಲಿ ಸ್ವಾಧ್ಯಾಯದ ಉಪಯೋಗಗೋಸ್ಕರವಾಗಿ ಕೆಲವು ನಾಂದಿ ಮುಂತಾದವುಗಳನ್ನು ಸಹ ಸಂಗ್ರಹಿಸಿರುತ್ತದೆ. ಈ ಪ್ರಯತ್ನದ ಲಾಭವನ್ನು ನಮ್ಮ ಕರ್ನಾಟಕದ ಜೈನ ಸಮಾಜವು ಯೋಗ್ಯ ಉಪಯೋಗ ಮಾಡಬಹುದೆಂಬದಾಗಿ ಆಶಿಸುತ್ತೇವೆ.

ಈ ಚಿಕ್ಕ ಪುಸ್ತಕದ ಭಾಷಾಂತರವನ್ನು ಮಾಡಲಿಕ್ಕೆ ಶ್ರೀಮಾನ್ ಚಂದಪ್ಪಾ ಜಿನ್ನಪ್ಪಾ ಡೋಂಗರೆ ಗೋಕಾಕ ಇವರು ಸ್ವಯಂ ಸ್ಫೂರ್ತಿಯಿಂದ ಉಮೇದ ಕೊಟ್ಟದ್ದಲ್ಲದೇ ಇದನ್ನು ತಮ್ಮ ಮಾತೋಶ್ರೀಯವರ ಹೆಸರಿನಿಂದ ಪ್ರಕಾಶ ಪಡಿಸುವಕಾರ್ಯವನ್ನು ಸಹ ವಹಿಸಿಕೊಂಡದ್ದರಿಂದ ಮತ್ತು ಇದನ್ನು ಸ್ಯಾದ್ವಾದ ಸಂಸ್ಥೆಗೆ ಅರ್ಪಣ ಮಾಡಿದ್ದರಿಂದ ಅತ್ಯಂತ ಆಭಾರಿ ಇರುತ್ತೇವೆ ಈ ಕಾರ್ಯದ ಯಾವತ್ತೂ ಶ್ರೇಯಕ್ಕೆ ಅವರೇ ಪಾತ್ರರಿರುತ್ತಾರೆನ್ನಲಿಕ್ಕೆ ಏನೂ ಅಡ್ಡಿಯಿಲ್ಲ. ಇತಿ ಶುಭಮ್.

ಗೋಕಾಕ. ೨೦—೯—೧೯೩೩.	ಬಾಳಗವಡ ದೇವಗವಡ ಪಾಟೀಲ. ಶೇಡಬಾಳಕರ.

—॥ ಶ್ರೀ ವೀತರಾಗಾಯನಮಃ ॥—

ಜೈನ ಬಾಲಬೋಧ.

೧ ನೇ ಭಾಗ.

೧ ನೇ ಪಾಠ.

ಣಮೋಕಾರ ಮಂತ್ರ.

ಣಮೋ ಅರಹಂತಾಣಂ । ಣಮೋ ಸಿದ್ಧಾಣಂ । ಣಮೋ ಆಇರಿಯಾಣಂ । ಣಮೋ ಉವಜ್ಝಾಯಾಣಂ । ಣಮೋ ಲೋಏ ಸವ್ವಸಾಹೂಣಂ ॥ ೧ ॥

ಅರ್ಥ:- ಅರಹಂತರಿಗೆ ನಮಸ್ಕಾರ ಸಿದ್ಧರಿಗೆ ನಮಸ್ಕಾರ ಆಚಾರ್ಯರಿಗೆ ನಮಸ್ಕಾರ. ಉಪಾಧ್ಯಾಯರಿಗೆ ನಮಸ್ಕಾರ. ಲೋಕದೊಳಗಿನ ಯಾವತ್ತೂ ಸಾಧೂರಿಗೆ ನಮಸ್ಕಾರ.

ಣಮೋಕಾರ ಮಂತ್ರದ ಮಹಾತ್ಮ್ಯ.

ಏಸೋ ಪಂಚ ಣಮೋಯಾರೋ ಸವ್ವಪಾವಪ್ಪಣಾಸಣೋ ।
ಮಂಗಲಾಣಂ ಚ ಸವ್ವೇಸಿಂ ಪಢಮಂ ಹೋಇ ಮಂಗಲಂ ॥ ೨ ॥

ಭಾವಾರ್ಥ:— ಈ ಣಮೋಕಾರ ಮಂತ್ರದ ಸ್ಮರಣೆಯಿಂದ ಪಾಪವು ಇಲ್ಲದಂತಾಗುತ್ತದೆ. ಎಂಥ ಸಂಕಟಗಳು ಬಂದಿದ್ದರು ಸಹ ಅವುಗಳ ನಿವಾರಣೆಯಾಗುತ್ತದೆ. ಮತ್ತು ಅದು ಯಾವತ್ತೂ ಕಾರ್ಯಗಳಲ್ಲಿ ಮಂಗಲದಾಯಕವಿರುತ್ತದೆ. ಈ ಮಂತ್ರವು ಮೂವತ್ತೈದು [೩೫] ಅಕ್ಷರಗಳದ್ದು ಅದೆ.

ಅರಹಂತರು.

ಮುನಿಗಳಿಗೆ ತಪಶ್ಚರ್ಯದ ಪ್ರಭಾವನೆಯಿಂದ ಯಾವಾಗ್ಯೆ ಕೇವಲ ಜ್ಞಾನವಾಗುತ್ತದೆಯೋ ಆಗ್ಯೆ ಅವರಿಗೆ ಅರಹಂತ ಅನ್ನುತ್ತಾರೆ. ಅವರು ಧರ್ಮದ ಉಪದೇಶವನ್ನು ಕೊಡುತ್ತಾರೆ. ಅಂತಾ ಅವರಿಗೆ ಮೊದಲು ನಮಸ್ಕಾರವನ್ನು ಮಾಡಿರುತ್ತದೆ.

ಸಿದ್ಧರು.

ಆಯುಷ್ಯವು ಪೂರ್ಣವಾದ ಮೇಲೆ ಅರಹಂತರ ಶರೀರವು ಕರ್ಪುರದಂತೆ ಹಾರಿ (ಕರಗಿ) ಹೋಗುತ್ತದೆ, ಮತ್ತು ಅವರ ಆತ್ಮಾ (ಜೀವ) ಲೋಕಾಕಾಶದಮೇಲೆ (ಸಿದ್ಧಶಿಲಾದಲ್ಲಿ) ಹೋಗಿ ಸ್ಥಿರವಾಗಿ ನಿಲ್ಲುತ್ತದೆ ಆಗ್ಯೆ ಅವರಿಗೆ ಸಿದ್ಧರು ಅನ್ನುತ್ತಾರೆ

ಆಚಾರ್ಯರು.

ಯಾವ ಮುನೀಶ್ವರರು ಎರಡನೇ ಮುನಿಗಳಿಗೆ ತಮ್ಮ ಸಂಘದಲ್ಲಿ ದಾಖಲಮಾಡಿಕೊಳ್ಳುತ್ತಾರೆ, ದಿಕ್ಷಾ ಕೊಡುತ್ತಾರೆ, ಏನಾದರೂ ಅಪರಾಧವಾದಲ್ಲಿ ದಂಡ [ಪ್ರಾಯಶ್ಚಿತ್ತ] ಕೊಡುತ್ತಾರೆ ಅಥವಾ ಸಂಘದೊಳಗಿಂದ ತೆಗೆದು ಹಾಕುತ್ತಾರೆ ಅವರಿಗೆ ಆಚಾರ್ಯರು ಅನ್ನುತ್ತಾರೆ.

ಉಪಾಧ್ಯಾಯರು.

ಯಾವ ಮುನೀಶ್ವರರು ತಾವುಸ್ವತಃ ಕಲಿಯುತ್ತಾರೆ ಮತ್ತು ಎರಡನೇ ಮುನಿಗಳಿಗೆ ಕಲಿಸುತ್ತಾರೆ ಅವರಿಗೆ ಉಪಾಧ್ಯಾಯರು ಅನ್ನುತ್ತಾರೆ.

ಸಾಧು.

ಉಚ್ಚಕುಲದೊಳಗಿನ ಮನುಷ್ಯರು ಮುನಿಗಳು ಆದರು ಅಂದರೆ ಅವರು ರಾಗದ್ವೇಷ ಮೋಹವನ್ನು ಬಿಟ್ಟು ಅಡವಿಯಲ್ಲಿ ನಿಲ್ಲುತ್ತಾರೆ. ಅಲ್ಲಿ ಧ್ಯಾನ ಮತ್ತು ಜ್ಞಾನದ ಅಭ್ಯಾಸವನ್ನು ಮಾಡುತ್ತಿರುತ್ತಾರೆ. ದಿವಸದಲ್ಲಿ ಒಂದು ವೇಳೆ ಶುದ್ಧ ಭೋಜನ (ಆಹಾರ) ಮಾಡುವದರದೆಶೆಯಿಂದ ಊರಲ್ಲಿ ಬರುತ್ತಾರೆ ರೊಕ್ಕ-ರೂಪಾಯಿ ಅರಿವೆ-ಅಂಚಡಿ ಮುಂತಾದ ಪರಿಗ್ರಹವನ್ನು ತಮ್ಮ ಹತ್ತರ ಇಡುವದಿಲ್ಲ ಅವರಿಗೆ **ಸಾಧು** ಅನ್ನುತ್ತಾರೆ.

ಪ್ರಶ್ನೆ.

೧ ಣಮೋಕಾರ ಮಂತ್ರವನ್ನು ಶುದ್ಧವಾಗಿ ಅನ್ನರಿ?
೨ ಈ ಮಂತ್ರದ ಮಹಾತ್ಮ್ಯವನ್ನು ಹೇಳಿರಿ?
೩ ಈ ಮಂತ್ರದಲ್ಲಿ ಎಷ್ಟು ಅಕ್ಷರಗಳು ಇರುತ್ತವೆ?
೪ ಈ ಮಂತ್ರದಲ್ಲಿ ಯಾರ್ಯಾರಿಗೆ ನಮಸ್ಕಾರವನ್ನು ಮಾಡಿರುತ್ತದೆ?
೫ ಆಚಾರ್ಯರು ದಂಡಕೊಡುತ್ತಾರೆ ಅಂದರೆ ನಿಮಗೇನು ತಿಳಿಯಿತು?

---

೨ ನೇ ಪಾಠ.

ವರ್ತಮಾನಇಪ್ಪತ್ತನಾಲ್ಕು ತೀರ್ಥಂಕರರಹೆಸರುಗಳು

೧ ವೃಷಭನಾಥ ೨ ಅಜಿತನಾಥ ೩ ಸಂಭವನಾಥ ೪ ಅಭಿನಂದನ ನಾಥ ೫ ಸುಮತಿನಾಥ ೬ ಪದ್ಮಪ್ರಭನಾಥ ೭ ಸುಪಾರ್ಶ್ವನಾಥ ೮ ಚಂದ್ರ ಪ್ರಭನಾಥ ೯ ಪುಷ್ಪದಂತನಾಥ ೧೦ ಶೀತಲನಾಥ ೧೧ ಶ್ರೇಯಾಂಸನಾಥ ೧೨ ವಾಸಪೂಜ್ಯನಾಥ ೧೩ ವಿಮಲನಾಥ ೧೪ ಅನಂತನಾಥ ೧೫ ಧರ್ಮ ನಾಥ ೧೬ ಶಾಂತಿನಾಥ ೧೭ ಕುಂಥುನಾಥ ೧೮ ಅರನಾಥ ೧೯ ಮಲ್ಲಿನಾಥ

೨೦ ಮುನಿಸುವ್ರತನಾಥ ೨೧ ನಮಿನಾಥ ೨೨ ನೇಮಿನಾಥ ೨೩ ಪಾರ್ಶ್ವನಾಥ ೨೪ ಮಹಾವೀರ.

ಇವರಲ್ಲಿ ವೃಷಭನಾಥರಿಗೆ ಆದಿನಾಥ, ಆದಿಬ್ರಮ್ಹ ಪುಷ್ಪದಂತರಿಗೆ ಸುವಿಧಿನಾಥ, ಮತ್ತು ಮಹಾವೀರರಿಗೆ ಶ್ರೀವರ್ಧಮಾನ, ಸನ್ಮತಿ ವೀರ ಅಂತ ಸಹ ಅನ್ನುತ್ತಾರೆ.

ಸಂಸಾರದೊಳಗಿರುವ ಜೀವುಗಳಿಗೆ ಯಾರು ಧರ್ಮದ ಉಪದೇಶವನ್ನು ಮಾಡುತ್ತಾರೆ. ಅವರಿಗೆ ತೀರ್ಥಂಕರರು ಅಂತಾ ಅನ್ನುತ್ತಾರೆ. ತೀರ್ಥ ಅಂದರೆ ಧರ್ಮವು.

ತೀರ್ಥಂಕರ ಪ್ರತಿಮೆಯ ಮೇಲೆ ಲಾಂಛನವಿರುತ್ತದೆ ಆ ಲಾಂಛನ ದಿಂದಲೇ ಆ ಪ್ರತಿಮೆಯು (ಮೂರ್ತಿ) ಯಾವ ತೀರ್ಥಂಕರರದು ಅದೆ ಅನ್ನುವದು ಗೊತ್ತಾಗುತ್ತದೆ. ಲಾಂಛನ ಅಂದರೆ ಚಿನ್ಹವು. (ಗುರ್ತು) ತೀರ್ಥಂಕರರ ಎಡಗಾಲಿನಮೇಲೆ ಯಾವಚಿನ್ಹವು ಇರುತ್ತದೆಯೋ ಆ ಚಿನ್ಹ ದಿಂದಲೇ ತೀರ್ಥಂಕರರ ಲಾಂಛನವನ್ನು ಗೊತ್ತು ಮಾಡುತ್ತಾರೆ.

ತೀರ್ಥಂಕರರು ಉಚ್ಚರಾಜಕುಲದಲ್ಲಿ ಹುಟ್ಟಿದವರು ಇರುತ್ತಾರೆ. ಆದ ರಿಂದ ಅವರ ಪತಾಕೆಯ[ನಿಶಾಣಿ] ಮೇಲೆ ಯಾವ ಚಿನ್ಹವಿರುತ್ತದೆಯೋ ಅದರ ಮೇಲಿಂದಲೂ ಸಹ ಅವರ ಲಾಂಛನ ಗೊತ್ತು ಮಾಡಿದ್ದು ಇರುತ್ತದೆ.

ವರ್ತಮಾನ ಕಾಲದ ಇಪ್ಪತ್ತನಾಲ್ಕು ತೀರ್ಥಂಕರರ ಲಾಂಛನಗಳು ಬೇರೆಬೇರೆ ಇರುತ್ತವೆ ಅವುಗಳ ಹೆಸರು.

ತೀರ್ಥಂಕರರ ಹೆಸರು	ಲಾಂಛನದ ಹೆಸರು.
೧ ವೃಷಭನಾಥ	ಎತ್ತು.
೨ ಅಜಿತನಾಥ	ಆನೆ.
೩ ಸಂಭವನಾಥ	ಕುದುರೆ.

೪ ಅಭಿನಂದನನಾಥ	ಕಪಿ.
೫ ಸುಮತಿನಾಥ	ಚಕ್ರವಾಕಪಕ್ಷಿ.
೬ ಪದ್ಮಪ್ರಭನಾಥ	ಕಮಲ.
೭ ಸುಪಾರ್ಶ್ವನಾಥ	ಸ್ವಸ್ತಿಕ.
೮ ಚಂದ್ರಪ್ರಭನಾಥ	ಚಂದ್ರ.
೯ ಪುಷ್ಪದಂತನಾಥ	ಮೊಸಳೆ.
೧೦ ಸೀತಲನಾಥ	ಪಿಂಪರೀವೃಕ್ಷ.
೧೧ ಶ್ರೇಯಾಂಸನಾಥ	ಗಂಡಕ.
೧೨ ವಾಸುಪೂಜ್ಯನಾಥ	ಕೋಣ.
೧೩ ವಿಮಲನಾಥ	ಕಾಡಹಂದಿ.
೧೪ ಅನಂತನಾಥ	ಏದ (ಸಾಯಾಳ)
೧೫ ಧರ್ಮನಾಥ	ವಜ್ರ.
೧೬ ಶಾಂತಿನಾಥ	ಚಿಗರೆ.
೧೭ ಕುಂಥುನಾಥ	ಕುರಿ.
೧೮ ಅರನಾಥ	ಮೀನ
೧೯ ಮಲ್ಲಿನಾಥ	ಕುಂಭ.
೨೦ ಮುನಿಸುವ್ರತನಾಥ	ಆಮೆ.
೨೧ ನಮಿನಾಥ	ನೀಲಕಮಲ.
೨೨ ನೇಮಿನಾಥ	ಶಂಖ.
೨೩ ಪಾರ್ಶ್ವನಾಥ	ಸರ್ಪ.
೨೪ ಮಹಾವೀರ	ಸಿಂಹ.

ಪ್ರಶ್ನೆ.

೧ ಐದನೇ, ಏಳನೇ, ಹತ್ತನೇ, ಹದಿನೈದನೇ, ಇಪ್ಪತ್ತನೇ, ಇಪ್ಪತ್ತ ನಾಲ್ಕನೇ ತೀರ್ಥಂಕರರ ಹೆಸರು ಹೇಳಿರಿ?

೨ ತೀರ್ಥಂಕರರು ಎಷ್ಟು ಜನರು? ೧ ನೇ ಮತ್ತು ಕಡೆಯ ತೀರ್ಥಂಕರರ ಹೆಸರು ಹೇಳಿರಿ?

೩ ಒಂದರಕ್ಕಿಂತ ಹೆಚ್ಚು ಹೆಸರು ಇದ್ದ ತೀರ್ಥಂಕರರು ಯಾರು? ಮತ್ತು ಹೆಚ್ಚಿನ ಹೆಸರುಗಳು ಯಾವವು?

೪ ತೀರ್ಥಂಕರರು ಇಪ್ಪತ್ತನಾಲ್ಕು ಮಂದಿ ಅಲ್ಲದೇ ಇನ್ನೂ ಹೆಚ್ಚಿಗೆ ಇರುತ್ತಾರೇನು? ಅಥವಾ ಕಡಿಮೆ ಇರುತ್ತಾರೆ ಹೇಳಿರಿ.

೫ ಸುವಿಧಿನಾಥ ಅಂತಾ ಯಾವ ತೀರ್ಥಂಕರರಿಗೆ ಅನ್ನುತ್ತಾರೆ?

೬ ಲಾಂಛನ ಅಂದರೇನು? ಮತ್ತು ಹ್ಯಾಗೆ ತಿಳಿದುಕೊಳ್ಳಬೇಕು?

೭ ಲಾಂಛನಗಳೆಷ್ಟು ಅವೆ? ಅವುಗಳ ಹೆಸರು ಹೇಳಿರಿ?

೮ ಶಾಂತಿನಾಥ ನಮಿನಾಥ ಪಾರ್ಶ್ವನಾಥ ಇವರ ಲಾಂಛನಗಳು ಯಾವವು?

೯ ಕುದುರೆ, ವಜ್ರ, ಕುಂಭ, ಶಂಖ ಈ ಲಾಂಛನಗಳಿದ್ದ ತೀರ್ಥಂಕರರ ಹೆಸರು ಹೇಳಿರಿ?

೧೦ ಸಿದ್ಧರಿಗೆ ಲಾಂಛನ ಆದೆಯೋ ಅಥವಾ ಇಲ್ಲವೋ ಹೇಳಿರಿ?

---

೩ ನೇ ಪಾಠ.

ಜೀವ ಮತ್ತು ಅಜೀವ.

ಯಾವದಕ್ಕೆ ಚೇತನಾ ಅಂದರೆ ಜ್ಞಾನ ಮತ್ತು ದರ್ಶನ ಅದೆ ಅದಕ್ಕೆ ಜೀವ ಅನ್ನುತ್ತಾರೆ. ಭಾವಾರ್ಥ:— ಈ ಲೋಕದಲ್ಲಿ ಎಷ್ಟು ಜನ ಪುರುಷರು ಸ್ತ್ರೀಯರು, ಪಶು, ಪಕ್ಷಿ, ಹುಳಗಳು ಮುಂತಾದ ಪ್ರಾಣಿಗಳು ತಿನ್ನುವಂಥವು

ಉಣ್ಣುವಂಥವು ಕುಡಿಯುವಂಥವು ನಡೆಯುವಂಥವು ನೋಡುವಂಥವು ಅವೆ ಇವುಗಳಲ್ಲಿ ಜೀವವು ಅದೆ.

ಯಾವದಕ್ಕೆ ಚೇತನಾ ಇಲ್ಲವೋ ಅದಕ್ಕೆ ಅಜೀವ ಅನ್ನುತ್ತಾರೆ. **ಉದಾ:**—ಮಣ್ಣು, ಇಟ್ಟಂಗಿ, ಕಲ್ಲು, ಕಟ್ಟಿಗೆ, ಖುರ್ಚಿ, ಪಲಂಗ, ಕಾಗದ, ಪೆಟ್ಟಿಗೆ ಮುಂತಾದವುಗಳು

ಜೀವದ ಭೇದಗಳು.

ಜೀವ ಎರಡು ಪ್ರಕಾರದವು ಅವೆ. ಒಂದು ಸಂಸಾರಿಜೀವವು ಮತ್ತು ಎರಡನೇದ್ದು ಮುಕ್ತಜೀವವು.

ಯಾವದು ಪುನಃ ಎಂದೂ ಸಂಸಾರದಲ್ಲಿ ಬರುವದಿಲ್ಲವೋ ಅದಕ್ಕೆ ಮುಕ್ತಜೀವ ಅನ್ನುತ್ತಾರೆ. ಸಿದ್ಧರಿಗೆ ಮುಕ್ತಜೀವ ಅನ್ನುತ್ತಾರೆ. ಸಂಸಾರಿ ಜೀವದಲ್ಲಿ ಒಂದು ತ್ರಸಜೀವ ಮತ್ತು ಎರಡನೇದ್ದು ಸ್ಥಾವರ ಜೀವ ಈ ಪ್ರಕಾರ ಎರಡು ಭೇದಗಳು ಇರುತ್ತವೆ

ತ್ರಸ ಅಂತ ಹೆಸರಿನದು ಒಂದು ಕರ್ಮ ಅದೆ. ಅದರ ಉದಯವಾಯಿತೆಂದರೆ ದ್ವೀಂದ್ರಿಯಾದಿಗಳಲ್ಲಿ ಯಾವವು ಜನ್ಮಧಾರಣಮಾಡುತ್ತವೆಯೋ ಅವುಗಳಿಗೆ **ತ್ರಸಜೀವ**ಗಳೆನ್ನುತ್ತಾರೆ. ನಡೆಯುವದು ಅಗಳಾಡುವದು ಈ ಕ್ರಿಯೆಗಳು ತ್ರಸಜೀವಗಳಲ್ಲಿಯೇ ಆಗುತ್ತವೆ. ಈ ಹಲನ ಚಲನ ಕ್ರಿಯೆಗಳಿಂದ ತ್ರಸಜೀವಗಳ ಪರಿಚಯವು ಚನ್ನಾಗಿ ಆಗುತ್ತದೆ. ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಪಂಚೇಂದ್ರಿಯ ಜೀವಗಳು ಇವು ತ್ರಸ ಜೀವಗಳು.

ಸ್ಥಾವರ ಅಂತ ಹೆಸರಿನ ಕರ್ಮದ ಉದಯದಿಂದ ಯಾವ ಜೀವಗಳು ಪೃಥ್ವಿ ವನಸ್ಪತಿ ಮುಂತಾದವುಗಳಲ್ಲಿ ಉತ್ಪನ್ನವಾಗುತ್ತವೆಯೋ ಅವುಗಳಿಗೆ ಸ್ಥಾವರ ಜೀವಗಳೆನ್ನುತ್ತಾರೆ. ಇವುಗಳ ಉತ್ಪತ್ತಿಯು ಶೀತ ಮತ್ತು ಉಷ್ಣ ಮುಂತಾದ ನಿಮಿತ್ತಗಳಿಂದ ತನ್ನಿಂದ ತಾನೇ ಆಗುತ್ತದೆ. ಪೃಥ್ವಿ (ಭೂಮಿ) ನೀರು, ಅಗ್ನಿ, [ಬೆಂಕಿ] ವಾಯು, (ಗಾಳಿ) ವನಸ್ಪತಿ [ವೃಕ್ಷ] ಇವು ಸ್ಥಾವರ ಜೀವಗಳು.

ಪ್ರಶ್ನೆ.

೧ ಪಮೆ, ವಳ್ಳ, ವಣಿಕಿ, ಆನೆ, ಕುದುರೆ, ಒಂಟೆ, ನವಿಲು, ಗಿಳಿ, ಗುಬ್ಬಿ ರೂಪಾಯಿ, ಗಾಳಿ, ದೀವಿಗೆ, ಕಾಗದ, ಮಾವಿನಹಣ್ಣು, ಎಲಿ, ಗಾಡಿ, ಎಲವು, ತೊಗಲು, ಕೂದಲು, ಬೇಳೆ, ಶಾಲ, ಮನುಷ್ಯ, ಕೋಳಿ ಇವುಗಳಲ್ಲಿ ಜೀವ ಯಾವದು ಮತ್ತು ಅಜೀವ ಯಾವದು?

೨ ತ್ರಸ ಮತ್ತು ಸ್ಥಾವರ ಇದರಲ್ಲಿ ಏನು ಭೇದವದೆ?

೩ ತ್ರಸ ಜೀವಗಳು ಎಷ್ಟು ಮತ್ತು ಯಾವ ಯಾವವು?

೪ ಸ್ಥಾವರ ಜೀವಗಳಲ್ಲಿ ಪ್ರಕಾರಗಳೆಷ್ಟು? ಮತ್ತು ಯಾವ ಯಾವವು?

೫ ಮುಕ್ತ ಆದ ಜೀವಗಳು ಪುನಃ ಸಂಸಾರದಲ್ಲಿ ಬರುತ್ತಾವೆಯೋ?

೪ ನೇ ಪಾಠ.

ಇಂದ್ರಿಯುಗಳು.

ಜೀವವು ಯಾತರಸಹಾಯದಿಂದ ತಿಳಿದು ಕೊಳ್ಳುತ್ತದೆಯೋ ಅದಕ್ಕೆ ಇಂದ್ರಿಯ ಅನ್ನುತ್ತಾರೆ. ಆ ಇಂದ್ರಿಯಗಳು ಐದು ಪ್ರಕಾರದ್ದು ಅವೆ. ೧ ಸ್ಪರ್ಶನೇಂದ್ರಿಯ ಅಂದರೆ ತ್ವಚಾ (ತೊಗಲು) ೨ ರಸನೇಂದ್ರಿಯ (ನಾಲಿಗೆ) ೩ ಘ್ರಾಣೇಂದ್ರಿಯ (ಮೂಗು) ೪ ಚಕ್ಷುರಿಂದ್ರಿಯ [ಕಣ್ಣು] ೫ ಕರ್ಣೇಂದ್ರಿಯ (ಕಿವಿ)

೧ ಯಾತರಿಂದ ಹರಗು, ವಜನ, ರುಕ್ಷ, ಜಿಗಟು, ಬಿರಸು, ಮೆತ್ತಗೆ, ತಂಪು, ಉಷ್ಣ ಇವುಗಳ ಜ್ಞಾನವಾಗುತ್ತದೆ ಆದಕ್ಕೆ ಸ್ಪರ್ಶನೇಂದ್ರಿಯ ಅನ್ನುತ್ತಾರೆ.

ಉದಾ:—ಬೆಂಕಿಯ ಸ್ಪರ್ಶವಾದಮೇಲೆ ಉಷ್ಣ ಮತ್ತು ನೀರಿನ ಸ್ಪರ್ಶವಾದಮೇಲೆ ತಂಪು ತಿಳಿಯುತ್ತದೆ.

೨ ಯಾತರಿಂದ ಕಹಿ, ಖಾರ, ಹುಳಿ, ಸವಳು ಮುಂತಾದ ರಸಗಳ ಜ್ಞಾನವಾಗುತ್ತದೆಯೋ ಅದಕ್ಕೆ ರಸನೇಂದ್ರಿಯು ಅನ್ನುತ್ತಾರೆ.

ಉದಾ:- ಪೇಡೆ, ಸವಿ, ಬೇವಿನ ಎಲೆ ಕಹಿ, ಮೆಣಶಿನಕಾಯಿ ಖಾರ, ಮತ್ತು ಲಿಂಬಿಕಾಯಿ ಹುಳಿ ಹತ್ತುತ್ತದೆ.

೩ ಯಾತರಿಂದ ಸುಗಂಧದ ಮತ್ತು ದುರ್ಗಂಧದ ಜ್ಞಾನವಾಗುತ್ತದೆ, ಅದಕ್ಕೆ ಘ್ರಾಣೇಂದ್ರಿಯು ಅನ್ನುತ್ತಾರೆ.

ಉದಾ: —ಗುಲಾಬಿಹೂ, ಕೇತಕಿ [ಕ್ಯಾದಗಿ] ಇವುಗಳಿಂದ ಸುಗಂಧವು ಮತ್ತು ಕೊಳೆತ ಪದಾರ್ಥ ಹಾಗು ರಾಕೇಲ ಎಣ್ಣೆಯಿಂದ ದುರ್ಗಂಧವು ಬರುತ್ತದೆ

೪ ಯಾತರಿಂದ ಕೆಂಪು, ಹಸರು, ಹಳದಿ, ನೀಲಿ, ಕರ್‍ರಗೆ, ಬೆಳ್ಳಗೆ ಮುಂತಾದ ಬಣ್ಣಗಳ ಅಥವಾ ಈ ಬಣ್ಣಗಳು ಒಂದರಲ್ಲಿ ಕೂಡಿ ಆಗುವ ಅನೇಕ ಪ್ರಕಾರದ ಬಣ್ಣ ಮುಂತಾದವುಗಳ ಜ್ಞಾನವು ಆಗುತ್ತದೆ. ಅದಕ್ಕೆ ಚಕ್ಷುರಿಂದ್ರಿಯು ಅನ್ನುತ್ತಾರೆ.

ಉದಾ: – ಹಾಲು, ಮೊಸರು, ಬೆಳ್ಳಿ ಇವು ಬೆಳ್ಳಗೆ ಇದ್ದಲಿ ಕರ್‍ರಗೆ, ರಕ್ತ ಕೆಂಪು, ಭಂಗಾರ ಹಳದಿ, ಮುಗಿಲು ನೀಲಿ, ಗಿಳಿ ಹಸರು ಮುಂತಾದವುಗಳು ಇರುತ್ತದೆ.

೫ ಯಾತರಿಂದ ಶಬ್ದದಜ್ಞಾನವಾಗುತ್ತದೆಯೋ ಅದಕ್ಕೆ ಕರ್ಣೇಂದ್ರಿಯು ಅನ್ನುತ್ತಾರೆ

ಉದಾ:– ಮನುಷ್ಯರ ಮಾತು ಪಶುಗಳ ಹಾಗು ಪಕ್ಷಿಗಳ ಕಿಲಬಿಲ ಶಬ್ದಗಳು ಅಥವಾ ವಾದ್ಯಗಳನ್ನು ಬಾರಿಸುವದು ಸ್ವನಾದಿ, ತುತೂರಿ ಮುಂತಾದವುಗಳ ಅವಾಜ ಕೇಳುವದು.

ಪ್ರಶ್ನೆ.

೧ ಇಂದ್ರಿಯಗಳು ಎಷ್ಟು ಅವೆ? ಮತ್ತು ಅವುಗಳ ಹೆಸರುಗಳೇನು?

೨ ಮೂರನೇ, ಐದನೇ ಇಂದ್ರಿಯಗಳಿಂದ ಏನು ಬೋಧವಾಗುತ್ತದೆ?

೩ ವಾಸನೇ ತೆಗೆದುಕೊಳ್ಳುವದು ಮತ್ತು ನೋಡುವದು ಇದು ಯಾವ ಇಂದ್ರಿಯಗಳಿಂದ ತಿಳಿಯುತ್ತದೆ?

೪ ಇರಿವೆಗಳಿಗೆ ಕಣ್ಣುಗಳು ಇರುವದಿಲ್ಲ ಆದರೆ ಅವು ಸಕ್ಕರೆ ಮುಂತಾದ ಮಿಠಾಯಿಗಳ ಹತ್ತರ ಹ್ಯಾಗೆ ಹೋಗುತ್ತವೆ?

೫ ಇಂದ್ರಿಯುಗಳ ಹೊರ್ತು ಜೀವವು ಇರುತ್ತದೆಯೋ ಅಥವಾ ಇಲ್ಲವೋ?

೬ ಇಂದ್ರಿ ಅಂದರೆ ಏನು? ಅವು ಎಲ್ಲಿ ಇರುತ್ತವೆ?

೭ ಕೈ, ಕಾಲು, ತಲೆ ಇವು ಇಂದ್ರಿಗಳು ಹೌದೋ ಅಲ್ಲವೋ?

೫ ನೇ ಪಾಠ.

ಐದು ಪ್ರಕಾರದ ಜೀವಗಳು.

೧ ಯಾವ ಜೀವಕ್ಕೆ ಫಕ್ತ ಒಂದೇ ಸ್ಪರ್ಶನ ಇಂದ್ರಿ ಇರುವದೋ ಅದಕ್ಕೆ ಏಕೇಂದ್ರಿಯು ಜೀವ ಅನ್ನುತ್ತಾರೆ.

ಉದಾ.—ಪೃಥ್ವಿ, ನೀರು, ಅಗ್ನಿ, ಗಾಳಿ, ವನಸ್ಪತಿ. ಮುಂತಾದವುಗಳು

೨ ಯಾವ ಜೀವಕ್ಕೆ ಸ್ಪರ್ಶನ ಮತ್ತು ರಸನ ಈ ಎರಡು ಇಂದ್ರಿಯುಗಳು ಇರುತ್ತವೆ. ಅವುಗಳಿಗೆ ದ್ವೀಂದ್ರಿಯು ಜೀವ ಅನ್ನುತ್ತಾರೆ.

ಉದಾ:—ಬಾಲುಳ, ಶಂಖ ಮುಂತಾದವುಗಳು.

೩ ಯಾವ ಜೀವಕ್ಕೆ ಸ್ಪರ್ಶನ, ರಸನ, ಘ್ರಾಣ ಈ ಮೂರು ಇಂದ್ರಿಯುಗಳು ಇರುತ್ತವೆ ಅವುಗಳಿಗೆ ತ್ರೀಂದ್ರಿಯು ಜೀವ ಅನ್ನುತ್ತಾರೆ.

ಉದಾ;—ತಗಣಿ, ಇರಿವೆ, ಚೀಳು ಮುಂತಾದವುಗಳು.

೪ ಯಾವ ಜೀವಕ್ಕೆ ಸ್ಪರ್ಶನ, ರಸನ, ಘ್ರಾಣ ಮತ್ತು ಚಕ್ಷು ಈ ನಾಲ್ಕು ಇಂದ್ರಿಯುಗಳು ಇರುತ್ತವೆ ಅವುಗಳಿಗೆ ಚತುರಿಂದ್ರಿಯು ಜೀವ ಅನ್ನುತ್ತಾರೆ.

ಉದಾ:—ನೊಣ, ಭ್ರಮರ (ಗುಂಗಿಹುಳ) ಪತಂಗ ಮುಂತಾದವುಗಳು.

೫ ಯಾವ ಜೀವಕ್ಕೆ ಐದು ಇಂದ್ರಿಗಳು ಇರುತ್ತವೆ ಅವು ಪಂಚೇಂದ್ರಿಯ ಜೀವಗಳು.

ಉದಾ: ದೇವ, ನಾರಕಿ, ಪಶು, ಮನುಷ್ಯ ಮುಂತಾದವುಗಳು.

ಪ್ರಶ್ನೆ.

೧ ಸೊಣ, ಎತ್ತು, ಸರ್ಪ, ಬೆಂಕಿ, ನೀರು, ಇರಿವೆ, ಶಂಖ ಬಾಲಕ [ಆಳಿ] ಅನೆ ಈ ಜೀವುಗಳಿಗೆ ಯಾವವು ಮತ್ತು ಎಷ್ಟು ಇಂದ್ರಿಯುಗಳು ಅವೆ?

೨ ದ್ವೀಂದ್ರಿಯ ಜೀವಕ್ಕಿಂತ ಚತುರಿಂದ್ರಿಯ ಜೀವದಲ್ಲಿ ಏನು ಹೆಚ್ಚಿಗೆ ಅದೆ?

೩ ಯಾವ ಜೀವಕ್ಕೆ ಕಣ್ಣುಗಳು ಇವೆ ಅವುಗಳಿಗೆ ಮೂಗು ಆರುತ್ತದೆಯೋ ಅಥವಾ ಇಲ್ಲ. ಮತ್ತು ಮೂಗು ಇರುತ್ತದೆ ಅದಕ್ಕೆ ಕಣ್ಣುಗಳು ಇರುತ್ತವೆ ಏನು?

೪ ನಿಮಗೆ ಯಾವ ಇಂದ್ರಿಯುಗಳು ಅವೆ? ಸ್ಥಾವರಜೀವಗಳಿಗೆ ಯಾವ ಇಂದ್ರಿಯುಗಳು ಇರುವದಿಲ್ಲ?

೫ ಒಬ್ಬಮನುಷ್ಯನು ಹುಟ್ಟಕುರುಡನು ಇರುತ್ತಾನೆ. ಆದರೆ ಅವನಿಗೆ ಎಷ್ಟು ಇಂದ್ರಿಯುಗಳು ಅವೆ ಅಂತಾ ಅನ್ನಬೇಕು?

೬ ಮೂಕನು ಮತ್ತು ಕಿವಡನು ಇವರಿಬ್ಬರಲ್ಲಿ ಏನು ಭೇದವದೆ?

೭ ನಿಮಗೆ ಯಾವ ಇಂದ್ರಿಯುಗಳು ಹೆಚ್ಚು ಕೆಲಸ ಕೊಡುತ್ತವೆ? ಮತ್ತು ಯಾವ ಇಂದ್ರಿಯುಗಳು ನಿಮಗೆ ಚಲೋ ಕಾಣಿಸುತ್ತವೆ?

೮ ಯಾರಿಗೆ ನಾಲಿಗೆ, ಕಣ್ಣು, ಕಿವಿಗಳಿರುವದಿಲ್ಲ ಇಂಥ ಒಬ್ಬಮನುಷ್ಯನನ್ನು ನಾವು ನೋಡಿದೆವು ಅಂದರೆ ಆ ನಮ್ಮ ಅಂಬೋಣವು ಖರೇಅದೆಯೋ ಅಥವಾ ಸುಳ್ಳು ಅದೆ?

೯ ಮನುಷ್ಯನಿಗೆ ಐದು ಇಂದ್ರಿಗಳು ಇರುತ್ತವೆ ಅಂದಮೇಲೆ ಕಿವಡನಿಗೆ ಮತ್ತು ಮೂಕನಿಗೆ ಮನುಷ್ಯ ಅಂತ ಅನ್ನಬೇಕೋ ಅಥವಾ ಅನ್ನಬಾರದು?

೧೦ ತ್ರೀಂದ್ರಿಯ ಜೀವ ಆಗುವದು ಉತ್ತಮವೋ? ಅಥವಾ ಚತುರಿಂದ್ರಿಯ ಜೀವ ಆಗುವದು ಉತ್ತಮ?

೬ ನೇ ಪಾಠ.

ಜೈನಂಗೆ ಮೂಲ ವ್ರತವು.

ರಾತ್ರಿ ಊಟತ್ಯಾಗ, ಪಂಚಪಾಪತ್ಯಾಗ, ಪಂಚಹಾಲ್ಮರದ ಹಣ್ಣುಗಳತ್ಯಾಗ, ಬೆಳೇಕುಂಬಳಕಾಯಿತ್ಯಾಗ, ನವನೀತತ್ಯಾಗ, ಮಾಂಸತ್ಯಾಗ, ಅದತ್ತಾದಾನತ್ಯಾಗ, ಜೇನತ್ಯಾಗ, ಗಿನ್ನತ್ಯಾಗ ಹೂವುಗಳತ್ಯಾಗ, [ಅಂದರೆ ತಿನ್ನುವದನ್ನು ಬಿಡವದು] ಅಗಾಲಿತಜಲತ್ಯಾಗ, ಅನಥದಂಡತ್ಯಾಗ, ಸಪ್ತ ವ್ಯಸನಗಳತ್ಯಾಗ ಮಾಡುವದೇ ಜೈನಂಗೆ ಮೂಲ ವ್ರತವು

೧ ಕೊಲೆ, (ಹಿಂಸಾ) ಹುಸಿ, [ಸುಳ್ಳು] ಕಳವು, ಪರದಾರ, [ಪರಸ್ತ್ರೀ] ಅತಿಕಾಂಕ್ಷಾ ಇವೇ ಪಂಚಪಾಪಗಳು

೨ ಅತ್ತಿ, ಆಲ, ಬಸರಿ ಗೋಳಿ, [ನಾಂದ್ರುಕ] ಪಿಂಪರಿ, ಇವೇ ಐದು ಹಾಲ್ಮರಗಳು.

೩ ನವನೀತ ಅಂದರೆ ಬೆಣ್ಣೆಯು ಬೆಣ್ಣೆಯನ್ನು ಕಾಯಿಸದೇ ಎಂದೂ ತಿನ್ನಬಾರದು ಇದರಲ್ಲಿ (೪೮) ನಾಲ್ವತ್ತೆಂಟು ಮಿನಿಟುಗಳಲ್ಲಿ ಸಂಮೂರ್ಛನ ಜೀವಗಳ ಉತ್ಪತ್ತಿಯಾಗುತ್ತದೆ

೪ ಕೊಡದೇ ಇದ್ದ ಇನ್ನೊಬ್ಬರ ಮಾಲು ತೆಗೆದು ಕೊಳ್ಳಬಾರನು.

೫ ನೀವು ಉತ್ತಮ ಕೊಡಿ ಅರಿವೆಯಿಂದ ಸೋಸಿದರೆ ಆ ಸೋಸಿದ ನೀರು (೪೮) ನಾಲ್ವತ್ತೆಂಟು ಮಿನಿಟುಗಳವರೆಗೆ (ಒಂದು ಮುಹೂರ್ತ) ಶುದ್ಧ ಇರುತ್ತವೆ ಇದರಂತೆ ಪ್ರಾಸುಕಮಾಡಿದರೆ ಅಂದರೆ ಲವಂಗ ಚೂರ್ಣಾದಿಗಳನ್ನು ಹಾಕಿದರೆ ಆರುತಾಸ ಮತ್ತು ಕುದಿಬರುವವರೆಗೆ ಕಾಯಿಸಿದರೆ ಇಪ್ಪತ್ತನಾಲ್ಕು ತಾಸ ಶುದ್ಧ ಉಳಿದು ಮುಂದೆ ಸಂಮೂರ್ಛನ ಜೀವಗಳ

ಉತ್ಪತ್ತಿಯಾಗುವದು ಕಾರಣಾ ಅಗಾಲಿತ ಜಲವನ್ನು ತ್ಯಾಗಮಾಡಬೇಕು.

೬ ತನಗೆ ವುಪಯೋಗವಿಲ್ಲದೆ ವ್ಯರ್ಥವಾಗಿ ಏಕೇಂದ್ರಿಯ ಜೀವದ ಹಿಂಸೆಯನ್ನು ಮಾಡಬಾರದು.

೭ ಜೂವಾ [ಜಿದ್ದ] ಆಡುವದು, ಮಾಂಸ ತಿನ್ನುವದು, ಸೆರೆ ಕುಡಿಯುವದು, ವೇಶಾಗಮನ ಮಾಡುವದು, ಬೇಟೆಯಾಡುವದು, ತುಡುಗ ಮಾಡುವದು, ಪರಸ್ತ್ರೀ ಸೇವನಮಾಡುವದು ಇವೇ ಏಳು ವ್ಯಸನಗಳು ಇವು ಪಾಪದ ಬೀಜಗಳು ಅವೆ. ಇವುಗಳನ್ನೆಲ್ಲ ತ್ಯಾಗಮಾಡುವದೇ ಜೈನನ ಮೂಲವ್ರತವು.

ಪ್ರಶ್ನೆ.

೧ ರಾತ್ರಿಯಲ್ಲಿ ಊಟವನ್ನು ಯಾಕೆ ಮಾಡಬಾರದು?

೨ ಪಂಚ ಪಾಪಗಳು ಯಾವವು?

೩ ಎಂಟು ಶ್ರಾವಕರ ಮೂಲ ಗುಣಗಳು ಯಾವವು?

೪ ಐದು ಹಾಲ್ಮರದ ಹಣ್ಣುಗಳು ಯಾವವು?

೫ ಬಿಳೇಕುಂಬಳಕಾಯಿಯನ್ನು ಯಾಕೆ ತಿನ್ನಬಾರದು?

೬ ನವನೀತ ಎಷ್ಟು ವೇಳೆಯವರೆಗೆ ಶುದ್ಧವಿರುತ್ತದೆ?

೭ ಮಾಂಸ ತಿಂದರೆ ಯಾವ ಪಾಪ ಹತ್ತುವದು?

೮ ಅದತ್ತಾದಾನದಿಂದ ಯಾವ ಕಷಾಯದ ಪುಷ್ಟಿಯಾಗುವದು?

೯ ಜೇನ ತ್ಯಾಗ ಯಾಕೆ ಮಾಡಬೇಕು? ಅದನ್ನು ಸೋಸಿದರೆ ಶುದ್ಧವಾಗುವದೇನ ?

೧೦ ಗಿನ್ನದಲ್ಲಿ ಏನು ದೋಷವದೆ?

೧೧ ಹೂಗಳನ್ನು ಯಾಕೆ ತಿನ್ನಬಾರದ?

೧೨ ಅಗಾಲಿತ ನೀರಿನಲ್ಲಿ ಏನು ದೋಷವಿರುವದು? ಸೋಸಿದನೀರು ಎಷ್ಟು ವೇಳೆಯುವರೆಗೆ ಶುದ್ಧ ಉಳಿಯುತ್ತವೆ?

೧೩ ಅನರ್ಥ ದಂಡ ಅಂದರೇನು?

೧೪ ವ್ಯಸನಗಳು ಎಷ್ಟುಅವೆ? ಅವುಗಳ ಹೆಸರು ಯಾವವು? ಇವುಗಳಿಂದ ಏನು ಆಗುತ್ತದೆ?

೭ ನೇ ಪಾಠ.

ಅಥಪಂಚ ಪರಮೇಷ್ಠಿ ಸ್ತೋತ್ರಮ್.

ಚಾಮರ ವೃತ್ತಂ

ಶ್ರೀ ಶತೇಂದ್ರ ಯೋಗಿವೃಂದ ವಂದ್ಯಪಾದ ಪಂಕಜಂ |
ಶಾಶ್ವತೇದ್ಧ ಬೋಧದೃಷ್ಟಿ ವೀರ್ಯಸೌಖ್ಯ ಭಾಸುರಮ್ ||
ಸುಪ್ರಶಸ್ತಯೋಗದಗ್ಧ ಘಾತಿಕರ್ಮ ವೈರಿಣಂ |
ಭೂ ಪ್ರಶಸ್ತನಾಥ ಮರ್ಹದೀಶಮರ್ಚಯಾಮ್ಯಹಮ್ || ೧ ||
ಅಷ್ಟಕರ್ಮ ವಿಪ್ರಮುಕ್ತ ಮಷ್ಟಸದ್ಗುಣೋಜ್ವಲಂ |
ದುಷ್ಟಭಾವ ದುಃಖದೂರ ಮಷ್ಟಮೀದರಾಗ್ರಜಮ್ ||
ಸ್ಪಷ್ಟದೃಷ್ಟ ಲೋಕಾಲೋಕ ಮಚ್ಯುತಂ ತುಲೋರ್ಜಿತಂ |
ತೋಷಯಾಮಿ ನಿಷ್ಠಿತಾರ್ಥ ಮಿದ್ಧ ಸಿದ್ಧ ಸಂಚಯಮ್ || ೨ ||
ಆಚರಂತಿ ಚಾರುಪಂಚ ವೃತ್ತಕಾನಿ ಯೇ ಸ್ವಯಂ |
ಚಾರಯತ್ಯನುಗ್ರಹೋರು ಬುದ್ಧಿತಃ ಸಮಾಶ್ರಿತಾನ್ ||
ಶೂರಮಾರ ಮಲ್ಲಮಾನ ಮರ್ದಕಾನ್ಗುಣೋಜ್ವಲಾಂ |
ಸ್ತಾಂಶ್ಚರಣ್ಯ ಮಂಗಲೋತ್ತಮಾನ್ಭಜಾಮಿ ಶಿಕ್ಷಕಾನ್ || ೩ ||
ದ್ವಾದಶಾಂಗ ಸಾಂಗಬಾಹ್ಯ ಶಾಸ್ತ್ರವಾರ್ಧಿ ಪಾರಗಾನ್ |
ಸಾಧುವಾದ ವಜ್ರಭಿನ್ನ ಮತ್ತವಾದಿ ಭೂಧರಾನ್ ||
ಸಾಧ್ಯ ಸಾಧ್ಯನಂತ ಶಾಂತ ಮೋಕ್ಷಮಾರ್ಗ ದೇಶಕಾ- |
ನಾದರೇಣ ತಾನ್ನಮಾಮಿ ಪಾಠಕಾನ್ಗುಣಾಂಬುಧೀನ್ || ೪ ||
ಮೋಕ್ಷಹೇತು ಭೂತ ಧರ್ಮ ಶುಕ್ಲಯೋಗ ತತ್ಪರಂ |
ದಕ್ಷಚಕ್ಷುರಾದಿ ದೃಷ್ಟವಾದಿ ರೋಧನಕ್ಷಮಂ ||
ಅಕ್ಷಯೋರು ಲಕ್ಷ್ಯಮೇಯ ಸತ್ಕಟಾಕ್ಷ ವೀಕ್ಷಣಂ |
ಮೋಕ್ಷ ಮುಖ್ಯ ಸಾಧುಸಂಘ ಮಾಯಜಾಮಿ ಸಿದ್ಧಯೇ || ೫ ||

||ಇತಿ ಪಂಚಪರಮೇಷ್ಠಿ ಸ್ತೋತ್ರಂ ಸಮಾಪ್ತಂ||

—|| ಓಂ ನಮಃ ಸಿದ್ಧೇಭ್ಯಃ ||—

ಜೈನ ಬಾಲಬೋಧ.

೨ ನೇ ಭಾಗ.

೧ ನೇ ಪಾಠ.

ಗುರು ಸ್ತವನ.

ಅಂತರ್ಬಾಹ್ಯ ಪರಿಗ್ರಹವನ್ನು ತ್ಯಜಿಸೀ ಆತ್ಮಸ್ವರೂಪೀ ಯೊಳೂ ।
ನಿಲ್ಲುವದಲ್ಲದೆ ನಾಶಮಾಡಲು ಈ ದುಷ್ಕರ್ಮ ಜಾಲಂಗಳೂ ॥
ತೋರ್ಪರು ಮಂಗಲ ಮೋಕ್ಷಮಾರ್ಗ ಸುಜನಾ ಭವ್ಯಾತ್ಮರಿದ್ದವರಿಗೇ ।
ಇಂಥಾ ಸದ್ಗುರು ಚರಣಕ್ಕೆರಗು ಮನವೇ ಸದಕ್ತಿ ಇಂದವರಿಗೇ ॥ ೧ ॥

ಭಾವಾರ್ಥ:— ಅಂತರಂಗ ಮತ್ತು ಬಹಿರಂಗ ಪರಿಗ್ರಹವನ್ನು ತ್ಯಾಗ ಮಾಡಿ ಆತ್ಮಸ್ವರೂಪದಲ್ಲಿ ಲೀನರಾಗಿ ಯಾವತ್ತು ದುಷ್ಕರ್ಮಗಳ ಜಾಲ ವನ್ನು ನಾಶಮಾಡುವದಕ್ಕಾಗಿ ಭವ್ಯ ಸಜ್ಜನರಿಗೆ ಉಪದೇಶವನ್ನು ಮಾಡಿ ಮಂಗಲ ಮಯವಾದ ಮೋಕ್ಷಮಾರ್ಗವನ್ನು ಯಾರು ತೋರಿಸುತ್ತಾರೆ ಇಂಥ ಸದ್ಗುರುಗಳ ಪಾದಕಮಲದಲ್ಲಿ ಸದ್ಭಕ್ತಿಯಿಂದ ಯಾವಾಗಲೂ ಮನಸ್ಸು ತಲ್ಲೀನವಾಗಿರಲಿ.

ಅಭಂಗ.

ವೀತರಾಗ ದೇವರೂ ಸದ್ಗುರು ನಿರ್ಗ್ರಂಥರೂ ।
ಜಿನವಾಣಿ ಗ್ರಂಥವು ಇವೇ ಸತ್ಯ ॥
ಜಿನೇಶ್ವರ ಹೇಳಿದಂಥ ತತ್ವವೇ ಸತ್ಯವು ॥
ಈ ರೀತಿ ತಿಳಿಯುವನು ಸಮ್ಯಕ್ತ್ವಿಯೂ ॥
ಶೆರೆ ಕುಡಿಯಬಾರದು ತಿನಬಾರದು ಮಾಂಸ ।
ತ್ಯಾಗಮಾಡ್ರಿ ಜೈನ ಶ್ರಾವಕರೂ ॥
ತ್ರಸಹಿಂಸಾ ತ್ಯಾಗ ಸ್ಥೂಲಾಸತ್ಯ ಬಿಟ್ಟು ।
ಸ್ಥೂಲ ಕಳವು ಬಿಡಬೇಕು ಶ್ರಾವಕರೂ ॥
ಪ್ರರಸ್ತ್ರೀ ಸೇವನ ವರ್ಜಿಸಬೇಕು ।
ಉತ್ಪನ್ನಕ್ಕಿಂತ ಖರ್ಚು ಹೆಚ್ಚಿಗಿರಬಾರದು ॥
ಇಂಥ ಮೂಳ ಗುಣ ಎಂಟು ಶ್ರಾವಕರು ।
ಪಾಲಿಸುವಂಥವರು ಖರೇ ಶ್ರಾವಕರು ॥
ಸದ್ಗುರು ಸಧ್ಯಕ್ಕೆ ಶಾಂತಿಸಾಗರವರು ।
ಸದ್ಭಕ್ತಿಯಿಂದ ಸ್ತುತಿಸರಿ ಎಲ್ಲರು ॥

೨ ನೇ ಪಾಠ.

ದ್ರವ್ಯ ಚರ್ಚಾ.

ನಾಲ್ಕು ಪ್ರಕಾರದ ತ್ರಸ ಜೀವಗಳು.

೧ ದ್ವೀಂದ್ರಿಯ ಜೀವ ೨ ತ್ರೀಂದ್ರಿಯ ಜೀವ ೩ ಚತುರಿಂದ್ರಿಯ ಜೀವ ೪ ಪಂಚೇಂದ್ರಿಯ ಜೀವ

ಟೀಪು:— ದ್ವೀಂದ್ರಿಯ ಜೀವ, ತ್ರೀಂದ್ರಿಯ ಜೀವ, ಚತುರಿಂದ್ರಿಯ ಜೀವ ಈ ಜೀವಗಳಿಗೆ ವಿಕಲತ್ರಯ ಅನ್ನುತ್ತಾರೆ.

ಪಂಚೇಂದ್ರಿಯ ಜೀವಗಳಲ್ಲಿ ತಿರ್ಯಂಚ ಪಂಚೇಂದ್ರಿಯ ಜೀವಗಳು ಮೂರು ಪ್ರಕಾರದ್ದು ಇರುತ್ತವೆ. ೧ ಜಲಚರ ಜೀವ ೨ ಸ್ಥಲಚರ ಜೀವ ೩ ನಭಚರ (ಖಗಚರ) ಜೀವ

೧ ಯಾವವು ಯಾವಾಗಲೂನೀರಿನಲ್ಲಿ ಇರುತ್ತವೆಯೋ ಅವು ಜಲಚರ ಜೀವಗಳು.

ಉದಾ:— ಮೀನ, ಮೊಸಳಿ ಮುಂತಾದವುಗಳು

೨ ಯಾವವು ಪೃಥ್ವಿಯ ಮೇಲೆ ತಿರುಗಾಡುತ್ತವೆಯೋ ಅವು ಸ್ಥಲಚರ ಜೀವಗಳು.

ಉದಾ:-ಆಕಳು, ಎಮ್ಮೆ, ನಾಯಿ, ಬೆಕ್ಕು, ಕುದುರೆ ಮುಂತಾದವುಗಳು

೩ ಯಾವುಗಳಿಗೆ ಆಕಾಶದಲ್ಲಿ ಹಾರಲಿಕ್ಕೆ ಬರುತ್ತದೆ. ಅವು ನಭಚರ ಅಥವಾ ಖಗಚರ ಜೀವಗಳು.

ಉದಾ:— ಗಿಳಿ, ಮೈನಾ, ಗುಬ್ಬಿ, ಕಾಗಿ, ಪಾರಿವಾಳ, ನವಿಲು ಮುಂತಾದವುಗಳು.

ಪಂಚೇಂದ್ರಿಯ ಜೀವಗಳಲ್ಲಿ ಸಂಜ್ಞಿ ಮತ್ತು ಅಸಂಜ್ಞಿಈ ಪ್ರಕಾರ ಎರಡು ಭೇದಗಳು ಆವೆ.

ಯಾವ ಜೀವಗಳಿಗೆ ಮನಸ್ಸು ಅದೆ ಅರ್ಥಾತ್ ಯಾವ ಜೀವಗಳಿಗೆ ಚಲೋ ಯಾವದು ಕೆಟ್ಟಯಾವನು ತಿಳಿಯುತ್ತದೆ ಅದೇ ಪ್ರಕಾರ ಯಾವವು ಶಿಕ್ಷಣ ಮತ್ತುಉಪದೇಶವನ್ನುಗ್ರಹಣಮಾಡುತ್ತವೆ ಅವು ಸಂಜ್ಞಿ ಜೀವಗಳು.

ಉದಾ:- ಒಂಟೆ, ಆನೆ, ನವಿಲು, ಗಿಳಿ, ಮಂಗ ಇತ್ಯಾದಿ ಪಂಚೇಂದ್ರಿಯ ತಿರ್ಯಂಚ, ಮನುಷ್ಯ, ದೇವ, ನಾರಕಿ.

ಯಾವ ಜೀವಗಳಿಗೆ ಮನಸ್ಸು ಇರುವದಿಲ್ಲ ಯಾವವು ಶಿಕ್ಷಣ ಮತ್ತು ಉಪದೇಶವನ್ನು ಗ್ರಹಣ ಮಾಡುವದಿಲ್ಲ ಅರ್ಥಾತ್ ಯಾರಿಗೆ ಚಲೋ ಯಾವದು ಕೆಟ್ಟಯಾವದು ತಿಳಿಯುವದಿಲ್ಲ ಅವುಗಳಿಗೆ ಅಸಂಜ್ಞಿ ಜೀವಗಳೆನ್ನುತ್ತಾರೆ ಈಯಾವತ್ತು ಅಸಂಜ್ಞಿ ಜೀವಗಳು ತಿರ್ಯಂಚ ಪ್ರಾಣಿಗಳಲ್ಲಿಯೇ ಇರುತ್ತವೆ.

ಪ್ರಶ್ನೆ.

೧ ಆನೆ, ಕುದುರೆ, ಇರುವೆ, ತಗಣಿ, ನೋಣ, ಗುಂಗೀಹುಳ ಇವುಗಳಲ್ಲಿ ವಿಕಲತ್ರಯ ಜೀವಗಳು ಯಾವವು ?

೨ ಸಂಜ್ಞಿ ಮತ್ತು ಅಸಂಜ್ಞಿ ಜೀವಗಳಲ್ಲಿ ಯಾವ ಭೇದವದೆ? ಇವುಗಳಲ್ಲಿ ನೀವು ಯಾರು?

೩ ಯಾವತ್ತು ಪಂಚೇಂದ್ರಿಯ ಜೀವಗಳು ಸಂಜ್ಞಿ ಇರುತ್ತವೆಯೋ ಇಲ್ಲೋ?

೪ ಯಾವತ್ತೂ ಜೀವಗಳು ಪಂಚೇಂದ್ರಿಯ ಇರುತ್ತವೆ ಏನು?

೫ ಹಂಸ, ನಾಯಿ, ಕೋಳಿ, ಮೀನ ಕಪ್ಪೆ, ಆಂವಿ, ಕಣ್ಣಕಪ್ಪಡೆ, ಕಾಗಿ ಇವುಗಳಲ್ಲಿ ಜಲಚರ ಜೀವಗಳುಯಾವವು? ನಭಚರ ಜೀವಗಳು ಯಾವವು?

೬ ಜಲಚರ ಮತ್ತು ಸ್ಥಲಚರ ಇವುಗಳಲ್ಲಿ ಭೇದವೇನು?

೭ ಸಂಜ್ಞಿ ಜೀವಗಳಿಗೆ ಹೆಚ್ಚಿಗೆ ಹೆಚ್ಚುಅಂದರೆ ಎಷ್ಟು ಇಂದ್ರಿಯಗಳು ಇರುತ್ತವೆ? ಮತ್ತು ಕಡಿಮೆಯಲ್ಲಿ ಕಡಿಮೆ ಎಷ್ಟು? ಯಾವ ಜೀವಕ್ಕೆ ಕಣ್ಣುಗಳು ಇರುವದಿಲ್ಲ ಅದರಲ್ಲಿ ಮತ್ತು ಸಂಜ್ಞಿ ಜೀವದಲ್ಲಿ ಏನು ಅಂತರವದೆ?

೮ ಆಕಾಶದಲ್ಲಿ ಬರೇತಿರ್ಯಂಚ ಪಂಚೇಂದ್ರಿಯ ಜೀವಗಳಷ್ಟೇ ಹಾರುತ್ತವೆ ಹ್ಯಾಗೆ? ಹಾರತಕ್ಕ ಶಕ್ತಿಇದ್ದ ಯಾವತ್ತು ಜೀವಗಳಿಗೆ ನಭಚರ ಅಂತ ಅನ್ನಲಿಕ್ಕೆ ಬರುತ್ತದೆ ಏನು?

೯ ಯಾವ ಜೀವವು ಆಕಾಶದಲ್ಲಿ ಬಹಳ ದೂರ ಹಾರುತ್ತದೆ ಮತ್ತು ಭೂಮಿಯ ಮೇಲೆ ತನ್ನ ಮನೆಯನ್ನು ಕಟ್ಟುತ್ತದೆ ಅದು ಸ್ಥಲಚರ ಅದೆ ಅಥವಾ ನಭಚರ ಅದೆ?

೧೦ ಒಂದು ಭಾಗದಲ್ಲಿ ಮೂರು ಮಾವಿನ ಗಿಡಗಳಮೇಲೆ ನಾಲ್ಕು ಕೋಕಿಲ ಪಕ್ಷಿಗಳು ಮಂಜುಳ ಸ್ವರವನ್ನು ತೆಗೆಯುತ್ತಲಿವೆ. ಮತ್ತು ಅವುಗಳ ಹತ್ತರ ನಾಲ್ಕು ಗುಲಾಬಿಯ ಹೂವುಗಳ ಮೇಲೆ ಏಳು ಭ್ರಮರಗಳು ಆನಂದದಿಂದ ಹಾರುತ್ತಲಿವೆ. ಆದರೆ ಇಲ್ಲಿ ಅಸಂಜ್ಞಿ ಜೀವಗಳು ಎಷ್ಟುಅವೆ? ಮತ್ತು ಸಂಜ್ಞಿ ಜೀವಗಳು ಎಷ್ಟು ಅವೆ?

೩ ನೇ ಪಾಠ.

ಸ್ಥಾವರ ಜೀವಗಳ ಭೇದಗಳು.

ಯಾವ ಜೀವಕ್ಕೆ ಒಂದೇ ಸ್ಪರ್ಶನೇಂದ್ರಿಯ ಇರುತ್ತದೆ ಅದಕ್ಕೆ ಸ್ಥಾವರ ಜೀವ ಅನ್ನುತ್ತಾರೆ, ಇವುಗಳಲ್ಲಿ ಐದು ಪ್ರಕಾರಗಳು ಅವೆ.

೧ ಯಾವ ಜೀವಗಳಿಗೆಪೃಥ್ವಿ ಇದೇ ಶರೀರವದೆಯೋ ಅವುಗಳಿಗೆ ಪೃಥ್ವಿ ಕಾಯಿಕ ಜೀವ ಅನ್ನುತ್ತಾರೆ.

ಉದಾ:—ಮಣ್ಣು, ಕಲ್ಲು, ಅಭ್ರಕ್, ರತ್ನ ಭಂಗಾರ, ಬೆಳ್ಳಿ ಮುಂತಾದ ಖಣಿಯೊಳಗಿಂದ ಹೊರಡುವ ಧಾತುಗಳು; ಆದರೆ ಇವು ಉತ್ಪತ್ತಿ ಸ್ಥಾನದಿಂದ ಬೇರೆ ಆದಮೇಲೆ ಬಹಳವಾಡಿ ಈ ಪೃಥ್ವಿಕಾಯಿಕದಲ್ಲಿ ಜೀವವುನಿಲ್ಲುವದಿಲ್ಲ.

೨ ನೀರು ಇದೇ ಯಾವಜೀವದ ಶರೀರ ಅದೆಯೋ ಅದಕ್ಕೆಜಲಕಾಯಿಕಜೀವ ಅನ್ನುತ್ತಾರೆ

ಉದಾ:—ನೀರು.

೩ ಅಗ್ನಿ ಇದೇ ಯಾವ ಜೀವದ ಶರೀರ ಅದೆಯೋ ಅದಕ್ಕೆ ಅಗ್ನಿಕಾಯಿಕ ಜೀವ ಅನ್ನುತ್ತಾರೆ.

ಉದಾ:—ದೀವಿಗೆಯು, ಜ್ಯೋತಿ, ಬೆಂಕಿ ಇತ್ಯಾದಿ.

೪ ವಾಯು ಇದೇ ಯಾವ ಜೀವದ ಶರೀರ ಅದೆಯೋ ಅದಕ್ಕೆ ವಾಯುಕಾಯಿಕ ಜೀವ ಅನ್ನುತ್ತಾರೆ.

ಉದಾ:—ಹವೆ ಗಾಳಿ.

೫ ವನಸ್ಪತಿ ಇದೇ ಯಾವ ಜೀವದ ಶರೀರ ಅದೆಯೋ ಅದಕ್ಕೆ ವನಸ್ಪತಿ ಕಾಯಿಕ ಜೀವ ಅನ್ನುತ್ತಾರೆ,

ಉದಾ:—ಗಿಡ, ಬಳ್ಳಿ, ಹಣ್ಣು, ಹೂ ಮುಂತಾದವುಗಳು.

ಈ ಐದು ಪ್ರಕಾರದ ಶರೀರಗಳನ್ನು ಧಾರಣಮಾಡುವ ಜೀವಗಳು ಸ್ಥೂಲ (ಬಾದರ) ಮತ್ತು ಸೂಕ್ಷ್ಮ ಅಂತ ಎರಡು ಪ್ರಕಾರದ್ದು ಅವೆ. ಯಾವ ಜೀವಗಳು ಎರಡನೇದವುಗಳಿಗೆ ಅಡ್ಡಿ ಮಾಡುತ್ತವೆ. ಮತ್ತು ಯಾರಿಗೆ ಎರ

ಡಸೇದವುಗಳಿಗೆ ಅಡ್ಡಿ ಮಾಡುತ್ತವೆ ಅವು ಬಾದರ ಕಾಯ ಜೀವಗಳು ಅಂತಾ ತಿಳಿಯಬೇಕು. ಸೂಕ್ಷ್ಮ ಜೀವಗಳು ಯಾವದೇ ಪದಾರ್ಥಕ್ಕೆ ಪ್ರತಿಬಂಧ ಮಾಡುತ್ತಿರುವದಿಲ್ಲ ಅಥವಾ ಯಾವದೇ ಪದಾರ್ಥ ಅವುಗಳಿಗೆ ಪ್ರತಿಬಂಧ ಮಾಡಲು ಸಮರ್ಥ ಇರುವದಿಲ್ಲ. ಇವೇ ಸೂಕ್ಷ್ಮ ಜೀವಗಳು.

ಪಂಚಸ್ಥಾವರ ಮತ್ತು ಒಂದು ತ್ರಸ ಇವುಗಳಿಗೆ ಷಟ್‌ಕಾಯ ಜೀವ ಗಳೆನ್ನುತ್ತಾರೆ.

ಪ್ರಶ್ನೆ.

೧ ಸ್ಥಾವರ ಜೀವಗಳಲ್ಲಿ ಎಷ್ಟು ಭೇದಗಳು ಅವೆ?

೨ ಯಾವ ಜೀವದ ಶರೀರವು ಹವಾಅದೆ ಅದಕ್ಕೆ ಏನು ಅನ್ನಬೇಕು?

೩ ಮಾವಿನ ಗಿಡ, ದ್ರಾಕ್ಷದ ಬಳ್ಳಿ, ಗುಲಾಬಿಯ ಹೂ ಮತ್ತು ಬೇವಿನ ಗಿಡದ ಎಲೆಗಳು ಇವು ಯಾವ ಜೀವಗಳು ಅವೆ?

೪ ಮುತ್ತು, ರತ್ನ, ಕಲ್ಲು, ಆಣೇಕಲ್ಲು ಇವು ಯಾವ ಜೀವಗಳು ಅವೆ?

೫ ಒಂದು ಕೆರೆಯಲ್ಲಿ ಕಮಲದ ಹೂವಿನ ಮೇಲೆ ನಾಲ್ಕು ಭ್ರಮರ ಗಳು ಹಾರಾಡುತ್ತಲಿವೆ ಆದರೆ ಅಲ್ಲಿ ಯಾವ ಯಾವ ಜೀವಗಳು ಅವೆ?

೬ ಷಟ್‌ಕಾಯ ಜೀವಗಳು ಯಾವವು?

೪.ನೇ ಪಾಠ.
ಪಂಚ ಪಾಪ.

ಪಾಪದಲ್ಲಿ ಐದು ಪ್ರಕಾರಗಳು ಅವೆ. ೧ ಹಿಂಸಾ ೨ ಅಸತ್ಯ ೩ ಕಳವು ೪ ಕುಶೀಲ ೫ ಪರಿಗ್ರಹ.

೧ ಪ್ರಮಾದದಿಂದ ತನ್ನ ಮತ್ತು ಇನ್ನೊಬ್ಬರ ಪ್ರಾಣದ ಘಾತಮಾಡು ವದು ಅಥವಾ ಮನಸ್ಸು ನೋಯಿಸುವದು ಇದಕ್ಕೆ ಹಿಂಸಾ ಅನ್ನುತ್ತಾರೆ. ಈ ಪಾಪವನ್ನು ಮಾಡುವವನಿಗೆ ನಿರ್ದಯಿ ಅಥವಾ ಹಿಸಂಕ ಅನ್ನುತ್ತಾರೆ.

೨ ಯಾವ ಮಾತಿಗೆ ಅಥವಾ ಯಾವ ವಸ್ತುವಿಗೆ ಹ್ಯಾಗೆ ನೋಡಿರು

ತ್ತದೆ ಅಥವಾ ಹ್ಯಾಗೆ ಹೇಳಿರುತ್ತದೆ. ಅಥವಾ ಹ್ಯಾಗೆ ವಿಚಾರದಲ್ಲಿ ತಂದಿಸು ತ್ತದೆ ಅದನ್ನು ಅದರಂತೆ ಹೇಳದೇ ಇರುವದಕ್ಕೆ ಸುಳ್ಳು ಮಾತಾಡುವದು ಅಥವಾ ಅಸತ್ಯ ಅನ್ನುತ್ತಾರೆ. ಈ ಪಾಪವನ್ನು ಮಾಡುವವನಿಗೆ ಖೊಟ್ಟ, ಅವಿಶ್ವಾಸಿ ಅನ್ನುತ್ತಾರೆ.

೩ ಇನ್ನೊಬ್ಬರ ವಸ್ತು ವಡಿವೆಗಳನ್ನು ಇಟ್ಟದ್ದಾಗಲಿ, ಬಿದ್ದದ್ದಾಗಲಿ ಅಥವಾ ಮರೆತದ್ದಾಗಲೀ ಅವರು ಕೊಡದೇ ತಾನು ತೆಗೆದುಕೊಳ್ಳುವದು ಅಥವಾ ಎತ್ತಿ ಇನ್ನೊಬ್ಬರಿಗೆ ಕೊಡುವದು ಇದಕ್ಕೆ ಕಳವು ಅನ್ನುತ್ತಾರೆ. ಈ ಪಾಪವನ್ನು ಮಾಡುವವನಿಗೆ ಕಳ್ಳ, ತುಡುಗ ಅನ್ನುತ್ತಾರೆ.

೪ ಪರ ಸ್ತ್ರೀಯರ ಕೂಡ ಸಂಭೋಗ ಮಾಡುವದಕ್ಕೆ ಕುಶೀಲ ಅನ್ನುತ್ತಾರೆ. ಈ ಪಾಪವನ್ನು ಮಾಡುವವನಿಗೆ ವ್ಯಭಿಚಾರಿ ಅನ್ನುತ್ತಾರೆ.

೫ ಧನ ಧಾನ್ಯ, ಎತ್ತು, ಆಕಳು, ಆನೆ, ಕುದುರೆ, ಮುಂತಾದ ವಸ್ತುಗಳ ಮೇಲೆ ಮೋಹ ಮಾಡುವದು ಮತ್ತು ಈ ಸಂಸಾರಿ ವಸ್ತುಗಳಲ್ಲಿ ಮಮತ್ವಭಾವ ಇಡುವದು, ಮತ್ತು ಸಂಸಾರಿಕ ವಸ್ತುಗಳನ್ನು ಒಟ್ಟುಗೂಡಿಸುವದರಲ್ಲಿ ಆಸಕ್ತಿ ಇಡುವದು, ಇದಕ್ಕೆ ಪರಿಗ್ರಹ ಅನ್ನುತ್ತಾರೆ ಈ ಪಾಪವನ್ನು ಮಾಡುವವನಿಗೆ ಲೋಭಿ, ಜೀನ, ಶೋಕಿ, ಕೃಪಣ, ಅನ್ನುತ್ತಾರೆ.

ಪ್ರಶ್ನೆ.

೧ ಪಾಪದಲ್ಲಿ ಭೇದಗಳೆಷ್ಟು? ಮತ್ತು ಅವು ಯಾವವು?

೨ ಒಬ್ಬ ವಿದ್ಯಾರ್ಥಿಯು ಎರಡನೇ ವಿದ್ಯಾರ್ಥಿಯ ಪುಸ್ತಕವನ್ನು ಅವನಿಗೆ ಹೇಳದೆ ಕೇಳದೆ ತನ್ನಮನೆಗೆ ವೈದರೆ ಅವನು ಯಾವ ಪಾಪವನ್ನುಮಾಡಿದನು?

೩ ಒಬ ಹುಡುಗನಿಗೆ ಅರಿವೆಯಮೇಲೆ ಬಹಳ ಪ್ರೇಮುನದೆ. ಮತ್ತು ಅವನು ಮೇಲಿಂದ ಮೇಲೆ ಹೊಸ ಹೊಸ ಅರಿವೆಗಳನ್ನು ವುಡಿಗೆ ತೊಡಿಗೆಗಳನ್ನು ಮಾಡಿಸುತ್ತಾನೆ. ನೀವು ಇವನಿಗೆ ಏನು ಅನ್ನುತ್ತೀರಿ?

೪ ಒಬ್ಬ ಹುಡುಗನು ಇನ್ನೊಬ್ಬ ಹುಡುಗನಿಗೆ ಒಂದು ಕಪಾಳದ ಮೇಲೆ ಬಡೆದನು ಮಾಸ್ತರರು ಅವನಿಗೆ ನೀನು ಬಡೆದಿರುತ್ತೀ ಏನು? ಅಂತಾ ಕೇಳಿದಾಗ ಅವನು "ಇಲ್ಲ", ಅಂತಹೇಳಿದರೆ ಅವನು ಯಾವ ಪಾಪವನ್ನು ಮಾಡಿದನು?

೫ ಹಿಂಸಾ ಅಂದರೇನು? ಉದಾಹರಣೆ ಕೊಡಿರಿ.

೬ ಸತ್ಯ ಮಾತಾಡುವವನು ಕಳವು ಮಾಡಬಹುದೆ?

೭ ಈ ಪಂಚ ಪಾಪಗಳ ವಿರುದ್ಧ ಏನು ಅದೆ?

೮ ಒಬ್ಬ ಮನುಷ್ಯನು ಮುಂದೆ ನೋಡುತ್ತಾ ಎಚ್ಚರದಿಂದ ನಡೆದಿದ್ದನು. ಆದರೂ ಅವನ ಪಾದ ಕೆಳಗೆ ಒಂದು ಇರಿವೆಯು ಸತ್ತರೆ ಅವನಿಗೆ ಹಿಂಸೆಯ ಪಾತಕವು ಹತ್ತಿತೊ ಅಥವಾ ಇಲ್ಲ?

೫ ನೇ ಪಾಠ.

ಕಷಾಯ

ಆತ್ಮನ ಹೊರ್ತು ಭಿನ್ನ ಪದಾರ್ಥಗಳಲ್ಲಿ ಆಸಕ್ತಿ ಅಥವಾ ಮೋಹ ಉತ್ಪನ್ನವಾಗುವದಕ್ಕೆ ಕಷಾಯ ಅನ್ನುತ್ತಾರೆ ಕಷಾಯಗಳು ನಾಲ್ಕು ಪ್ರಕಾರದವು ಅವೆ. ೧ ಕ್ರೋಧ, ೨ಮಾನ, ೩ಮಾಯಾ, ೪ಲೋಭ,

೧ ಸಿಟ್ಟು ಬರುವದಕ್ಕೆ ಕ್ರೋಧ ಅನ್ನುತ್ತಾರೆ,

೨ ಗರ್ವ ಉತ್ಪನ್ನವಾಗುವದಕ್ಕೆ ಮಾನ ಅನ್ನುತ್ತಾರೆ.

೩ ಕಪಟ ಮಾಡುವದು ಅರ್ಥಾತ್ ಮನದಲ್ಲಿ ಒಂದು ವಚನದಲ್ಲಿ ಒಂದು, ಮತ್ತು ಮಾಡುವದರಲ್ಲಿ ಬೇರೆ ನೇ ಮಾಡುವದು ಇದಕ್ಕೆ ಮಾಯಾ ಅನ್ನುತಾರ್ತೆ.

೪ ಯಾವದಾದರೊಂದು ವಿಷಯದಲ್ಲಿ ಅತ್ಯಂತ ಅಭಿಲಾಷೆಯನ್ನು ಮಾಡುವದಕ್ಕೆ ಲೋಭ ಅನ್ನುತ್ತಾರೆ.

ಈ ನಾಲ್ಕು ವಿಷಯಗಳು ಪಾಪ ಬಂಧದ ಮುಖ್ಯ ಕಾರಣಗಳು ಇರುತ್ತವೆ. ಮತ್ತು ಜೀವಕ್ಕೆ ಅತ್ಯಂತ ದುಃಖಕೊಡುವವು ಇರುವವು.

ಪ್ರಶ್ನೆ.

೧ ಕಷಾಯ ಅಂದರೆನು? ಅವು ಎಷ್ಟು ಅವೆ? ಅವುಗಳ ಹೆಸರು ಹೇಳಿರಿ.

೨ ಕಷಾಯ ಮಾಡುವದರಿಂದ ಏನು ಆಗುತ್ತದೆ?

೩ ಲೋಭಿ ಮತ್ತು ಗರ್ವಿಷ್ಟ ಮನುಷ್ಯನಲ್ಲಿ ಯಾವ ಕಷಾಯಗಳು ಇರುತ್ತವೆ?

೪ ಒಬ್ಬ ವಿದ್ಯಾರ್ಥಿಯು ಹುಷಾರನಿದ್ದು ಇನ್ನೊಬ್ಬನು ಮಂದ ಬುದ್ಧಿಯವನು ಇರುತ್ತಾನೆ. ಮೊದಲನೇದವನಿಗೆ ಎರಡನೇದವನು ಏನಾದರು ಪ್ರಶ್ನ ಕೇಳಿದರೆ ಮೊದಲನೇದವನು ಅವನಿಗೆ ಉತ್ತರ ಹೇಳದೆ ಉಲಟ ಅವನದು ನಿಂದೆಯನ್ನು ಮಾಡಿ ತನ್ನ ಶಿಫಾರಸವನ್ನು ಮಾಡಿಕೊಂಡರೆ ಅವನಿಗೆ ಯಾವ ಕಷಾಯದ ಬಂಧವಾಗುತ್ತದೆ?

೫ ಸಿಟ್ಟು ಬಂದರೆ ಯಾವ ಕಷಾಯದ ಬಂಧವಾಗುತ್ತದೆ?

೬ ಮಾಯಾ ಅಂದರೆ ಏನು ?

೬ ನೇ ಪಾಠ.

ಗತಿ.

ಜೀವದ ವಿಶೇಷ ಸ್ಥಿತಿಗೆ ಗತಿ ಅನ್ನುತ್ತಾರೆ. ಗತಿಯಲ್ಲಿ ನಾಲ್ಕು ಪ್ರಕಾರಗಳು ಅವೆ. ೧ ನರಕಗತಿ ೨ ತಿರ್ಯಂಚಗತಿ ೩ ಮನುಷ್ಯಗತಿ ೪ ದೇವಗತಿ

೧ ನರಕ ಗತಿ:— ಈ ಪೃಥ್ವಿಯ ಕೆಳಗೆ ಏಳು ನರಕಗಳು ಅವೆ. ನರಕದಲ್ಲಿ ಅತ್ಯಂತ ದುಃಖವಿರುತ್ತದೆ. ಅಲ್ಲಿ ಇರುವ ಜೀವಗಳಿಗೆ ಹಗಲು ರಾತ್ರಿ ಅತ್ಯಂತ ದುಃಖವನ್ನು ಭೋಗಿಸ ಬೇಕಾಗುತ್ತದೆ, ಒಂದು ಕ್ಷಣ ಸಹ ಸುಖ ಸಿಗುವದಿಲ್ಲ. ಪಶು ಅಥವಾ ಮನುಷ್ಯರು ಸತ್ತು ನರಕದಲ್ಲಿ ಜನ್ಮವನ್ನು ತಾಳುತ್ತಾರೆ ಆಗ್ಯೆ ಆ ಜೀವಕ್ಕೆ ನರಕಗತಿ ಆಯಿತು ಅಂತಾ ಅನ್ನುತ್ತಾರೆ. ಈ ಗತಿಯಲ್ಲಿ ಇರುವ ಜೀವಗಳು ಪಂಚೇಂದ್ರಿಯ ಇರುತ್ತವೆ.

೨ ತಿರ್ಯಂಚ ಗತಿಃ— ಪಶು, ಪಕ್ಷಿ, ಇರುವೆ, ಹುಳಗಳು ಮುಂತಾದ ಪ್ರಾಣಿಗಳಿಗೆ ತಿರ್ಯಂಚ ಅನ್ನುತ್ತಾರೆ. ಯಾವ ದಾದರೊಂದು ಜೀವವು ಸತ್ತ ಮೇಲೆ ಈ ಗತಿಯಲ್ಲಿ ಯಾವಾಗ್ಯೆ ಜನ್ಮವನ್ನು ಧಾರಣ ಮಾಡುತ್ತದೆಯೋ ಆಗ್ಯೆ ಅದಕ್ಕೆ ತಿರ್ಯಂಚ ಗತಿಯಲ್ಲಿ ಹುಟ್ಟಿತು ಅಂತಾ ಅನ್ನುತ್ತಾರೆ, ಈ ಗತಿ

ಯಲ್ಲಿ ಐದೂ ಇಂದ್ರಿಯಗಳ ಜೀವಗಳು ಇರುತ್ತವೆ.

೩ ಮನುಷ್ಯಗತಿ:— ಯಾವದೇ ಜೀವವು ಸತ್ತಮೇಲೆ ಯಾವಾಗೈ ಮನುಷ್ಯನ ಶರೀರವನ್ನು ಧಾರಣಮಾಡುತ್ತದೆ. ಆಗ್ಯೆ ಅದಕ್ಕೆ ಮನುಷ್ಯಗತಿ ಪ್ರಾಪ್ತವಾಯಿತು ಅಂತಾ ಅನ್ನುತ್ತಾರೆ.

೪ ದೇವಗತಿ:— ಮೇಲೆ ಹೇಳಿದ ಮೂರು ಪ್ರಕಾರದ ಜೀವಗಳ (ನರಕಗತಿ, ತಿರ್ಯಂಚಗತಿ, ಮನುಷ್ಯಗತಿ) ಹೊರ್ತು ನಾಲ್ಕನೇದ್ದೊಂದು ಪ್ರಕಾರವದೆ. ಯಾರಿಗೆ ಅನೇಕ ಪ್ರಕಾರದ ಉತ್ತಮೋತ್ತಮ ಭೋಗೋಪ ಭೋಗಗಳು ಪ್ರಾಪ್ತವಾಗುತ್ತವೆ ಯಾರ ಶರೀರವು ಸಪ್ತಧಾತು ರಹಿತ ದಿವ್ಯ ಇರುತ್ತದೆ ಮತ್ತು ಯಾರು ರಾತ್ರಿ ಹಗಲು ಸುಖದಲ್ಲ ಮಗ್ನ ಇರುತ್ತಾರೆ ಇಂಥವರಿಗೆ ದೇವ ಅನ್ನುತ್ತಾರೆ ಈದೇವರಲ್ಲಿ ಯಾರ ಜನ್ಮವುಆಗುತ್ತದೆಯೋ ಅವರಿಗೆ ದೇವಗತಿ ಪ್ರಾಪ್ತ ವಾಯಿತಂತನ್ನುತ್ತಾರೆ. ಈ ಗತಿಯಲ್ಲಿರುವ ಜೀವಗಳು ಪಂಚೇಂದ್ರಿಯಯೇ ಇರುತ್ತವೆ.

ಪ್ರಶ್ನೆ.

೧ ಗತಿ ಎಷ್ಟು ಅವೆ? ಅವುಗಳ ಹೆಸರುಗಳು ಯಾವವು?

೨ ಎಲ್ಲರಲ್ಲಿ ಉತ್ತಮಗತಿ ಯಾವದು? ಮತ್ತು ಕೆಟ್ಟಗತಿ ಯಾವದು?

೩ ನರಕಗಳು ಎಷ್ಟುಅವೆ? ಮತ್ತು ಅವು ಎಲ್ಲಿಅವೆ? ಅಲ್ಲಿ ಇರತಕ್ಕ ಜೀವಗಳಿಗೆ ಸುಖ ಇರುತ್ತದೆಯೋ ಅಥವಾ ದುಃಖ ವಿರುತ್ತದೆ?

೪ ಬೆಕ್ಕು, ಎತ್ತು, ಮೀನ, ಗಿಡ, ಮನುಷ್ಯ, ಕುದುರೆ, ಮಂಗ, ಆಳು ಮನುಷ್ಯ, ಹೆಂಡತಿ, ಹುಡುಗ, ಹುಡಿಗಿ, ಇರುವೆ ದೇವ ಈ ಜೀವಗಳು ಯಾವ ಯಾವ ಗತಿಯಲ್ಲಿ ಇರುತ್ತವೆ?

೫ ಒಂದು ಆಕಳು ಸತ್ತಿತು ಮತ್ತು ಅದು ಮನುಷ್ಯ ಗತಿಯಲ್ಲಿ ಹುಟ್ಟಿದರೆ ಅದು ಮೊದಲು ಯಾವ ಗತಿಯಲ್ಲಿ ಇತ್ತು? ಮತ್ತು ಈಗ್ಯೆ ಯಾವ ಗತಿಯಲ್ಲಿ ಹೋಯಿತು?

೬ ಒಂದು ವೇಳೆ ಯಾವದಾದರೊಂದು ಜೀವವು ನರಕದೊಳಗಿಂದ ಹೊರಟು ನಾಯಿ ಆಗಿ ಹುಟ್ಟಿದರೆ ಇವುಗಳಲ್ಲಿ ಯಾವ ಸ್ಥಿತಿಯು ಉತ್ತಮ ವಾದದ್ದು?

ಅಥ ನಾಂದಿಗಳು.

[ಇದನ್ನು ಯಾವಾಗಲೂ ಶಾಸ್ತ್ರವನ್ನು ಓದುವದಕ್ಕೆ ಸುರುಮಾಡುವ ಮೊದಲು ಅನ್ನುತ್ತಿರಬೇಕು.]

ಓಂ ನಮಃ ಸಿದ್ಧೇಭ್ಯಃ । ಶ್ರೀ ವೀತರಾಗಾಯನಮಃ । ಶ್ರೀ ಗುರುಭ್ಯೋ ನಮಃ । ಶ್ರೀ ವಾಗ್ದೇವತೇಭ್ಯೋ ನಮಃ ॥

ಓಂಕಾರಂ ಬಿಂದು ಸಂಯುಕ್ತಂ ನಿತ್ಯಂ ಧ್ಯಾಯಂತಿ ಯೋಗಿನಃ ।
ಕಾಮದಂ ಮೋಕ್ಷದಂ ಚೈವ । ಓಂಕಾರಾಯ ನಮೋ ನಮಃ ॥ ೧ ॥

ಅವಿರಲ ಶಬ್ದ ಘನೌಘಾ ಪ್ರಕ್ಷಾಲಿತ ಸಕಲಭೂತ ಮಲ ಕಲಂಕಾ ।
ಮುನಿಭಿರು ಪಾಶಿತತೀರ್ಥಾ ಸರಸ್ವತೀ ಹರತುನೋ ದುರಿತಮ್ ॥ ೨ ॥
ಅಜ್ಞಾನತಿಮಿರಾಂಧಾನಾಂ ಜ್ಞಾನಾಂಜನ ಶಲಾಕಯಾ। ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇನಮಃ ॥ ೩ ॥

ಪರಮಗುರವೇನಮಃ ಪರಂಪರಾಚಾರ್ಯ ಗುರವೇನಮಃ । ಸಕಲ ಕಲುಷ ನಿರ್ಧ್ವಂಸಕಂ ಶ್ರೇಯಸಾಂ ಪರಿವರ್ಧಕಂ ಧರ್ಮ ಸಂಬಂಧಕಂ ಭವ್ಯ ಜೀವಮನಃ ಪ್ರತಿಬೋಧಕಾರಕಮಿದಂ ಶಾಸ್ತ್ರಂ [೧] * * * ಶ್ರೀ ರತ್ನ ಕಂಡರ ಶ್ರಾವಕಾಚಾರ ನಾಮಧೇಯಂ ಅಸ್ಯಮೂಲ ಗ್ರಂಥಕರ್ತಾರಃ ಶ್ರೀ ಸರ್ವಜ್ಞದೇವಾಃ ತದುತ್ತರ ಗ್ರಂಥಕರ್ತಾರಃ ಶ್ರೀ ಗಣಧರ ದೇವಾಃ ತೇಷಾಂ ವಚೋನುಸಾರಮಾಸಾದ್ಯ ಶ್ರೀ [೨] * * * ಸಮಂತಭದ್ರಾಚಾರ್ಯೇಣ ವಿರಚಿತಂ ವಕ್ತಾರಃ ಶ್ರೋತಾರಃ ಸಾವಧಾನತಯಾ ಶೃಣ್ವಂತು ।

ಮಂಗಲಂ ಭಗವಾನ್ ವೀರೋ ಮಂಗಲಂ ಗೌತಮೋಗಣೀ ।
ಮಂಗಲಂ ಕುಂದಕುಂದಾದ್ಯೋ ಜೈನಧರ್ಮೋಸ್ತು ಮಂಗಲಂ ॥

---

[೧] * * * ಓದುತ್ತಿರುವ ಶಾಸ್ತ್ರದ ಹೆಸರು ತೆಗೆದುಕೊಳ್ಳಬೇಕು.
[೨] * * * ಓದುತ್ತಿರುವ ಗ್ರಂಥಕರ್ತರ ಹೆಸರು ತೆಗೆದುಕೊಳ್ಳಬೇಕು.

ಪರಮ ಪರಂಜ್ಯೋತಿ ಕೋಟಿ|ಚಂದ್ರಾದಿತ್ಯ ಕಿರಣ ಸುಜ್ಞಾನ ಪ್ರಕಾಶಃ | ಸುರರ ಮುಕುಟಮಣಿ ರಂಜಿತ ಚರಣಾಬ್ಜ ಶರಣಾಗೋ ಪ್ರಥಮ ಜಿನೇಶಾ || ೧ ||

ಸಾರಿದೆ ಸಕಲಜೀವಗಳ ರಕ್ಷಿಪಳೆಂದು ಸೇರಿದೆ ನಾ ಬಂದುನಿಮ್ಮ ನ s | ಚಾರು ಮತಿಯನಿಟ್ಟು ಸಲಹು ಎನ್ನನು ಶ್ರುತವಾರಿಧಿ|ಸರಸ್ವತಿತಾಯೀ |೨|

ಬಾರದೆ ಭವಸಿಲ್ಲ ತಿರಗೋದುನೆಲೆ ನಿಲ್ಲ ಸೇರಿ ಉಣ್ಣೋದು ಮೂಲಿ ನಿಲ್ಲಾ | ಆಂರಾರ ಒಸುರೊಳು ಜನಿಸಿ ಪುಟ್ಟಿದೆ ನಾನು ಮಾಂರ ವಿಜಯ ಕಾಯೋ ಜಿನಪಾ || ೩ ||

ಮಂಗಲ ಕಾರಣೆ ಮಂಗಲಮಯ ಹೇಮ ಉತ್ತುಂಗ ಗುಣಾಬ್ಧಿ ಚಂದ್ರಮನೇ| ಮಂಗಲ ಮೂರ್ತಿ ಶ್ರೀ ಆದಿಜಿನೇಶಾ ಅಷ್ಟಾಂಗವಿಂದಲಿ ಎರಗುವೆನು || ೪ ||

ಆದಿ ಜಿನನ ಕೊಂಡಾಡುವ ಜನರಿಗೆ ಹಿಂದಿನ ಭವದ ಕರ್ಮಗಳು | ಆದಿತ್ಯ ನಂದನ ಉದಯದಿಂಹರಿವ್ರುದು ಅಂಧ ಕಾರಕ್ಕೆ ಸಮಾನೆಂದು || ೫ ||

ಸಿರಿಘನರುಚಿ ಪಿಡಿದವನಿಗೆ ಜಗದೊಳು ಪರಿಗ್ರಹಾದಿಗಳ್ ತಡೆದಪ್ಪುದೇ | ಧರೆಯೊಳು ಮದವೆದ್ದ ಮದ್ದಾನೆ ಚರಿಸಲು ಕಿರಿದಾ ಬೇಲಿಗಳ್ ತಡೆದಪ್ಪುವದೇ || ೬ ||

ಹರಿಕ್ಷೋಣಿ ಪತಿಧರ ಧರಸ್ತುತ್ಯ ಪಾದಾಬ್ಜ ಹರಿಹರ ಕೋಟಿಸು ಪಾದಾ |"ಹರಿಹರ ಭವಹರ ಹರಿಶುತ ಪದಹರ ಹರಿವೈರಿ ಪಾಲಿಸು ಎನ್ನಾ" || ೭ ||

ಸುರನರರುರಗ ಪತಿಗಳ ಮೊದಲಾದ ಸುರಚಿತ ಮಣಿಮುಕುಟ ತಿಂದು| ಭಕ್ತಿಯೊಳೆರಗಿಸಿ ಕೊಂಡಾಡೇವನ ಚರಣ ಕಮಲಕ್ಕೆ ಎರಗುವೆನು || ೮ ||

ದೇವರು ಶ್ರುತಗುರುಗಳ ಮನದೊಳಗಿಟ್ಟು ಭಾವಿಸಿ ಜೀವ ರಕ್ಷಣೆಗೇ | ಪಾವನಮೊದಲೆಂದು ಪಾಲೀಸ್ವೈ ತ್ವರೆದಿಂದ ಪೇಳ್ವೆನು ಭಾವಿಕ ಭವ್ಯಾ ||೯||

ನೀರನಳಿದು ಹಂಸ ಕ್ಷೀರವ ಸೆಳೆದಂತೆ ಮೆಲ್ಲನೇ ಸುಖಮಂ ಒಲ್ಲಮು | ಆರಯ್ಯ ಕವಿತೆಯ ತಪ್ಪನಿದ ಲ್ಲಿ ಸೇರಿದ ಗುಣವ ಸ್ವೀಕರಿಸೀ || ೧೦ ||

ಹಲವು ಓದಿದರೇನ್ನು ಗಿರಿಯಸುತ್ತಿದರೇನು ಸಿರಿದ. ಲಾಂಛನ ತೊಟ್ಟ

ರೇನೂ । ನಿಜಿಪರಮಾತ್ಮನ ಧ್ಯಾನವನರಿಯದೇ ನರಿಕೂಗಿ ಬಳಲಿ ಸತ್ತಂತೇ ‖ ೧೧ ‖

ವೈರೀದಿಂ ಕೇಡಲ್ಲ ಸತ್ಪುರುಷರ ಸ್ನೇಹವು ಶೇರಲು ಮತ್ತಾತಿ ಸೌಖ್ಯಾ। ವೈರವಾದೊಡೆಕೇಡು ಖಳರೊಳಗತಿ ಸ್ನೇಹಸೇರಿದರೆ ಪರಿಪರಿ ಹಾನೀ ‖ ೧೨ ‖

ಮತಿ ಶ್ರುತಾವಧಿ ಮನಃ ಪರ್ಯಾಯ ಜ್ಞಾನಗಳತಿಶಯವಾದ ಸನ್ಮುನಿಗೇ । ಅತಿಕೌತುಕ ಪುಟ್ಟಿತೆಂದೊಡೆದಿಂ ನಳಿದಲ್ಪ ಮತಿಗಳಿಗೇಕೆ ಮತ್ಸರವು ‖ ೧೩ ‖

ತನ್ನ ಬಲ್ಲಂದವಿ ಕೀರ್ತಿಪಿ ಧರ್ಮವಾ ಮುನ್ನ ಮಾಡಿದ ಕರ್ಮ ಗತಿಯಾ । ಭಿನ್ನವ ಮಾಡುವ ಬಗಿಯೊಂದಲ್ಲದೇ ಚನ್ನಾಗಿ ತಿಳಿವರಿನ್ನಹುದೇ ‖ ೧೪ ‖

ಲೋಕದ ಜನಕೆಲ್ಲಾ ಬೇಕಾದ ಜಿನಧರ್ಮ ಲೋಕದೊಳತಿ ಭವ್ಯರು ನೋಡೀ । ಏಕಾನೇಕವಾಗಿರುಹುದು ಜಿನಾಗಮ ಸುಪ್ರೌಢರಾಲೋಕಿಸುವರು ‖ ೧೫ ‖

ಕಳವು ಪರದಾರ ಹಿಂಸೆ ಮದ್ಯ ಮಾಂಸಕೆ ಮನವೆಳಿಚಿ ದುಃಷ್ಪಾಪದಿಂದಾ । ದುಶ್ಚರಿತ ತಿಳಿಯದೆ ದುರ್ಗತಿಗೆ ಗುರಿಯಾಗಿ ದುಃಖಸಹಿಸಬೇಡಾತ್ಮಾ ‖ ೧೬ ‖

ಶ್ರೀ ಸುರಪತಿನುತ ಪಾದಪಯೋಜನ ಕೇಸರಿ ಪೀಠದೊಳೆಸವ ! ಭಾಸುರ ತೇಜದ ಸಕಲ ಜಿನೇಂದ್ರರ ಶಾಶ್ವತ ಸುಖ ನೀವುದೆಮಗೇ ‖ ೧೭ ‖

ಕಂಡೇನು ಸುರರಾಜ್ಯ ನಿಂದು ಪೂಜಿತಪಾದಾ ಕಂಡೆನೋ ಭವ ಭಂಜನನಾ । ಕಂಡೆನು ಮೂಲೋಕದೊಡೆಯ ಪಾರ್ಶ್ವೇಶನ ಕಂಡು ಸುಕೃತವನು ಪಡದೇ ‖ ೧೮ ‖

ದೇವರ ದೇವನ ರವಿ ಕೀರ್ತಿರಾಜಗೆ ಜೀವಾದಿ ಸಪ್ತತತ್ವವನ್ನೂ। ಜೀವ ಹಿತಾರ್ಥವನಿರೂಪಿಸಿದನು ಜಿನ ದೇವ ನಿಂದುಪಕಾರ ರುಂಟೇ ‖ ೧೯ ‖

ನುಡಿಯುವದು ಪುದ್ಗಲ ಕೇಳುವದು ಪುದ್ಗಲ ಕಡೆಗೆ ಪುದ್ಗಲ ಸ್ನೇಹ ಕೋಪಾ । ಜಡದೇಹನೂಂಕಿ ನನ್ನೆದೆಯೊಳಿರಯ್ಯ ಬಾ ಓಡಲಾ ಚಿದಂಬರ ಪುರುಷಾ ‖ ೨೦ ‖

ತನುಜಿನಗ್ರುಹವೆಂದು ಮನಸಿಂಹಪೀಠದೋಳ್ ಅನುಪಮ ಆತ್ಮನೆ ಜಿನನೆಂದೂ। ನೆನೆವನೆಲ್ಲವ ಬಿಟ್ಟು ಕಣ್ಮುಚ್ಚಿನೋಳ್ಪವಗೆ ಜಿನತಾನೇ ತೋರ್ಪನು ತನ್ನೊಳಗೇ ॥೨೧॥

ಕೆಡಿಸಿ ಕರ್ಮವನೊಂದು ಉಪವಾಸ ಫಲದಿಂದ ತಡಿಯದೆ ಮೋಕ್ಷ ಸಂಪದವಾ। ಬಿಡದೆ ಮಹಾತ್ಮರ ಕಥೆಯಿದು ಭವ್ಯರು ಬಿಡದೇ ಲಾಲಿಸಿ ಮುಕ್ತಿಗಹುದು ॥ ೨೨ ॥

ನಾಲ್ಕು ಸಂಘಕ್ಕೆ ದಾನಾದೀಗಳು ನನಗೆ ಮಾಡಬೇಕೆಂಬ ಚಿತ್ತ ವುಳ್ಳವಳೂ। ಲೋಕದೋಳ್ ಅವಳು ಮಹಾಪುಣ್ಯ ಸತಿಎಂದು ನಾಲ್ಕು ಪತಿಗಳು ಸ್ತುತಿಪರೂ ॥ ೨೩ ॥

ವ್ಯೆಯಲ್ಲಾ ಕಣ್ಣು ವ್ಯೆಯಲ್ಲಾ ಮನಸು ವ್ಯೆಯಲ್ಲಾ ಬಹು ಸುಖ ಶಕ್ತೀ। ವ್ಯೆಯಲ್ಲಾ ಪ್ರಭೆಯಾದಾ ಮಹಿಮೆ ನಿನ್ನ ಧೇಯೆೊಳಯ್ಯ ನಿರಂಜನ ಸಿದ್ಧಾ ॥ ೨೪ ॥

ಕೇಳಲಿ ರವಿಕೀರ್ತಿ ಸಪ್ತತತ್ವದ ಕಾಲುಕೇಳು ನೆಲ್ಲವನು ಚನ್ನಾಗೀ। ಕೇಳೀದ ವೇಲೆ ಕರ್ಮವ ಸುಟ್ಟು ಕೈವಲ್ಯ ಸಾಲೆಗೆಯ್ಯುವದು ಪೇಳು ವೆನೂ ॥ ೨೫ ॥

[ಶಾಸ್ತ್ರಮುಗಿದ ಕೂಡಲೇ ಅನ್ನತಕ್ಕದ್ದು.]

ಇದು ಜಿನ ಕಥೆಯನ್ನು ಕೇಳಿದವರ ಪಾಪಬೀಜನಿರ ನಾಶನ ಬಹುದು। ತೇಜ ಬಹುದು ಇಂದ್ರಪದವಿ ಬಹುದು ಮೋಕ್ಷಲಾಭ ಬಹುದು ಕಟ್ಟಕಡೆಗೆ॥ ಗಣನೆವಿಲ್ಲದ ಬುದ್ಧಿ ಗಣಧರೆಲ್ಲರು ಪಾಡಿ ದಣುವಿಕಿಲ್ಲದೆ ಭಜಿಸುವರು ಕ್ಷಣದೊಳು ಕರ್ಮದ ಬಡವಿದಗ್ಧಿಪರೆಂದು ಹಣೆಯ ಚಾಚುವೆ ಪಾದಾಂಭುಜಕೇ ॥ ೧ ॥

ನಮಃ ತಸ್ಮೈ ಸರಸ್ವತ್ಯೈ ವಿಮಲಜ್ಞಾನ ಮೂರ್ತಯೇ। ವಿಚಿತ್ರಾ ಲೋಕ ಯಾತ್ರೆಯಂ ಯತ್ಪ್ರಸಾದಾ ತ್ಪ್ರವರ್ತತೇ ॥ ನಮೋ ವೃಷಭಸೇನಾದಿಗೌತುಮಾಂತ್ಯ ಗಣೇಶಿನೇ। ಮೂಲೋತ್ತರ ಗುಣಾಢ್ಯಾಯ ಸರ್ವಸ್ಮೈ ಮುನಯೇನಮಃ ॥ ೨ ॥

ಗುರುಭಕ್ತ್ಯಾವಯಂ ಸಾರ್ಧದ್ವೀಪದ್ವಿತೀಯ ವರ್ತಿನಃ । ವಂದಾಮಹೇ ತ್ರಿಸಂಖ್ಯೋನ ನವಕೋಟಿ ಮುನೀಶ್ವರಾನ್ ॥ ಅಜ್ಞಾನ ತಿಮಿರಾಂಧಾನಾಂ ಜ್ಞಾನಾಂಜನ ಶಲಾಕಯಾಃ । ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇನಮಃ ॥ ೩ ॥

ಗುರುವಃ ಪಾಂತ ವೋನಿತ್ಯಂ ದರ್ಶನಜ್ಞಾನನಾಯಕಃ ! ಚಾರಿತ್ರಾರ್ಣವ ಗಂಭೀರಾಃ ಮೋಕ್ಷಮಾರ್ಗೋಪದೇಶಕಃ ॥ ಮೋಕ್ಷಮಾರ್ಗಶ್ಯ ನೇತಾರಂ ಭೇತ್ತಾರಂ ಕರ್ಮಭೂಭೃತಾಂ । ಜ್ಞಾತಾರಂ ವಿಶ್ವತತ್ವಾನಾಂ ವಂದೇ ತದ್ಗುಣಲಬ್ಧಯೇ ॥ ೪ ॥

ಸಮ್ಯಗ್ದರ್ಶನ ಜ್ಞಾನಚಾರಿತ್ರಾಣಿ ಮೋಕ್ಷಮಾರ್ಗಃ ॥

ಶ್ರೀ ಜಿನ ಆರುತಿ.

ಆರತಿ ಜಿನನಾ ಽ ಥಾ ಽ ಽ ಜಯ ಜಯ ॥ ಪಲ್ಲ ॥ ಕಾಮ ಽ ಕ್ರೋಧ ಽ ಆದೀ ಽ ಅ ಽ ರೀ ಜಿಂಕುನಿ ಶಾಂತೀ ನಿಜಾಂತ ಽ ರೀ ॥ ಭೋಗಿಸಿ ಅರಿಹಂತಾ ಽ ಽ ಜಯ ಜಯ । ಆರತಿ ॥ ೧ ॥ ದೋಷ ಅಠರಾ ತ್ಯಾಗ ಕರೋನೀ । ನಿರಪೇಕ್ಷ ಬೋಧಾ ಽ ಸಮವ ಶರಣೀ ॥ ದೇಶೀ ನಿಜಭಕ್ತಾ ಽ ಽ ಜಯ ಜಯ । ಆರತಿ ॥ ೨ ॥ ಅನಂತ ದರ್ಶನ ಽ ಜ್ಞಾನ ಽ ತುಜಸೀ । ವೀರ್ಯ ಸ್ಸೌಖ್ಯಾ ಽ ನಂತ ಪಾವಸೀ ॥ ಮುಕ್ತೀ ಽ ಶ್ರೀ ಕಾಂತಾ ಽ ಽ ಜಯ ಜಯ । ಆರತಿ ॥ ೩ ॥ ತೃಷ್ಣ ಽ ಝಾಲೋ ಸಂಸೃತಿ ಮಾಝೀ । ದೃಶ್ಯ ವಿಷಯ ಹೇ ಭಾರೀ ಗಾಂಜೀ ॥ ದರ್ಶನದೇ ಆ ಽ ತಾ ಽ ಽ ಜಯ ಜಯ । ಆರತಿ ॥ ೪ ॥ ಕರ್ಮ ಅಷ್ಟಕ ಹೇ ಽ ದಗ್ಧ ಽ ಕರಣ್ಯಾ । ಸಮ್ಯಕ್ ಬೋಧ ಽ ಆರತಿ ಕರುಣಿಯಾ ॥ ಮೋವಾ ಽ ಳಿ ತೊ ಆ ಽ ತಾ ಽ ಽ ಜಯ ಜಯ । ಆರತಿ ॥೫॥

ಅಥ ಇಷ್ಟಪ್ರಾರ್ಥನೆಯು.

ಶಾಸ್ತ್ರಸ್ವಾಧ್ಯಾಯ ಮಾಡುವದರಲ್ಲಿ ಯಾವಾಗಲೂ ಸಜ್ಜನರ ಸಂಗತಿಯಲ್ಲಿ, ಸಾಧುಜನರ ಗುಣಗಾಯನ ಮಾಡುವದರಲ್ಲಿ, ಹಾಗು ದೋಷವಾದದಲ್ಲಿ ಮೌನವೃತ್ತಿಯು ಮತ್ತು ಎಲ್ಲರಕೂಡಲೂ ಹಿತ ಮಿತ ಮತ್ತು ಮಿಷ್ಟ ಭಾಷಣವನ್ನಾಡುವ ಭಾವನೆಯು ಮುಕ್ತಿಗೆ ಕಾರಣವಾದದ್ದು ಇದು ಆತನಲ್ಲಿ ನಿರಂತರ ಜನ್ಮಜನ್ಮಾಂತರದಲ್ಲಿ ಇರಲಿ. ಹೇ ಜಿನೇಂದ್ರ ! ಮುಕ್ತಿಯು ಪ್ರಾಪ್ತವಾಗುವವರೆಗೆ ನಿನ್ನ ಪದದ್ವಯದಲ್ಲಿ ನನ್ನ ಮನಸ್ಸು ಲೀನವಾಗಿರಲಿ. ಅಕ್ಷರ ಪದಾರ್ಥ ಮಾತ್ರಾ ಏನಾದರೂ ಹೀನ ಆದಲ್ಲಿ ಭಗವತಿದೇವಿ ನನ್ನನ್ನು ಕ್ಷಮಿಸಿ ನನ್ನ ದುಃಖವನ್ನು ಪರಿಹರಿಸಲಿ.

ಉಪದೇಶ.

೧ ಯಾರದೂ ಮನಸ್ಸು ನೋಯಿಸಬೇಡಿರಿ.
೨ ಯಾವಾಗಲೂ ಖರೇ ಮಾತುಗಳನ್ನು ಆಡರಿ.
೩ ಕೇಳದೇ ಇನ್ನೊಬ್ಬರ ವಸ್ತುವಡಿವೆಗಳನ್ನು ತೆಗೆದುಕೊಳ್ಳಬೇಡಿರಿ.
೪ ಬ್ರಹ್ಮಚರ್ಯವನ್ನು ಪಾಲನಮಾಡಿರಿ.
೫ ಲೋಭ (ಆಶಾ) ಮಾಡಬೇಡಿರಿ.
೬ ಮದ್ಯ (ದಾರು) ಮಾಂಸ ಮಧು (ಜೇನ) ಇವುಗಳನ್ನು ತಿನ್ನಬೇಡಿರಿ.
೭ ಎಲ್ಲರ ಕೂಡ ಸವಿಮಾತುಗಳನ್ನಾಡರಿ.
೮ ಪ್ರಾತಃಕಾಲದಲ್ಲಿ ಎದ್ದು ಅರಹಂತರ ನಾಮಸ್ಮರಣೆಯನ್ನು ಸ್ತುತಿ ಸ್ತೋತ್ರಗಳನ್ನು ಮಾಡರಿ.
೯ ಯಾವಾಗಲೂ ಶರೀರವನ್ನು ಸ್ವಚ್ಛ ಇಡರಿ.
೧೦ ವಿದ್ಯೆಯನ್ನು ಕಲಿಯುವದರಲ್ಲಿ ಮನಸ್ಸು ಹಚ್ಚರಿ.
೧೧ ಮಿಥ್ಯಾ ದೇವ, ಮಿಥ್ಯಾ ಶಾಸ್ತ್ರ, ಮಿಥ್ಯಾ ಗುರುಗಳಲ್ಲಿ ವಿನಯ ಮತ್ತು ಅವಿನಯ ಎರಡೂ ಮಾಡಬೇಡಿರಿ.

—[ಸಮಾಪ್ತ.]—

ಶ್ರೀಮದಾಚಾರ್ಯ ಶಾಂತಿಸಾಗರ ದಿಗಂಬರ ಜೈನ ಸ್ಯಾದ್ವಾದ ಧರ್ಮಪ್ರಸಾರಕ ಸಂಸ್ಥಾಂತರ್ಗತ

ಶ್ರೀ ಶಾಂತಿಸಾಗರ ಗ್ರಂಥ ಮಾಲೆಯ ಪುಷ್ಪಗಳು.

ಪುಷ್ಪ.	ಹೆಸರು.	ಭಾಷೆಯು.
೧	ಸ್ವಾಮಿ ಕಾರ್ತಿಕೇಯಾನು ಪ್ರೇಕ್ಷಾ.	ಕನ್ನಡ
೨	ಜೈನಧರ್ಮ ಪ್ರಶ್ನೋತ್ತರ ಮಾಲಾ. (ಲಿಪಿ ಬಾಲಬೋಧ)	”
೩	ದೇವಶಾಸ್ತ್ರ ಗುರುಪೂಜಾ ಮತ್ತು ಆಹಾರದಾನ ವಿಧಿ	”
೪	ಶ್ರೀ ಸಮ್ಮೇದ ಸಿಖರಜಿ ಮಹಾತ್ಮ್ಯ ವ ಪೂಜಾ.	ಮರಾಠಿ
೫	ತ್ರಿಮೂಢತಾ ಖಂಡನ ೧, ೨ ನೇ ಆವೃತ್ತಿ	ಕನ್ನಡ
೬	ಸುಭಾಷಿತಾವಲಿ.	ಮರಾಠಿ
೭	ಜೈನ ಸಾಧುಗಳ ನಗ್ನತ್ವ. [೧-೨ ನೇ ಆವೃತ್ತಿ]	”
೮	ಜೈನ ಬಾಲಬೋಧ ೧-೨ ಭಾಗ.	ಕನ್ನಡ
೯	ಜೀವ ಮತ್ತು ಕರ್ಮ ವಿಚಾರ.	”
೧೦	ಸಜ್ಜನಚಿತ್ತ ವಲ್ಲಭ. (ಅಚ್ಚಿನಲ್ಲಿದೆ)	”
೧೧	ದ್ವಾದಶಾನು ಪ್ರೇಕ್ಷಾ.	ಮರಾಠಿ
೧೨	ಜೈನವಾಚನ ಪಾಠಮಾಲಾ.	ಕನ್ನಡ
೧೩	ಭಗವತಿ ಆರಾಧನಾ (ಅಚ್ಚಿನಲ್ಲಿದೆ)	ಮರಾಠಿ
೧೪	ರಯಣಸಾರ	”
೧೫	ತ್ರಿಮೂಢತಾ ಖಂಡನ.	”

ಪರಮಾತ್ಮ ಪ್ರಕಾಶವೆಂಬ ಗ್ರಂಥವು ಶೀಘ್ರವೇ ಕನ್ನಡದಲ್ಲಿ ಈ ಗ್ರಂಥ ಮಾಲೆಯಿಂದ ಪ್ರಸಿದ್ಧವಾಗತಕ್ಕದ್ದಿದೆ.

ಮಹಾಮಂತ್ರಿ.

ಈ ಪುಸ್ತಕವನ್ನು ಪಿ. ಜೇ. ಡೋಂಗರೆ ಇವರು ತಮ್ಮ ಶ್ರೀ ಶಂಕರ ಮುದ್ರಣಾಲಯ ಗೋಕಾಕದಲ್ಲಿ ಮುದ್ರಿಸಿ ಮತ್ತು ಅಲ್ಲಿಯೇ ಪ್ರಸಿದ್ಧಿಸಿದರು.